# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಆಗಸ್ಟ್ 18, 2021

ಸಂಪುಟ : 48 ಸಂಚಿಕೆ : 96 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಸುನಂದ ಪಂಚಾಕ್ಷರಿ ನಿಧನ



ಬೆಂಗಳೂರಿನ ವಾಸಿ
ಶ್ರೀ ಸಿ.ಪಿ.ಪಂಚಾಕ್ಷರಿ ಅವರ ಧರ್ಮಪತ್ನಿ
**ಶ್ರೀಮತಿ ಸಿ.ಪಿ. ಸುನಂದ** ಅವರು ದಿನಾಂಕ 17.08.2021ರ ಮಂಗಳವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು. ಸುನಂದ, ದಾವಣಗೆರೆಯ ದಿ. ಅಂದನೂರು ಶಿವಲಿಂಗಪ್ಪ ಅವರ ಪುತ್ರಿ. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೂವರು ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.08.2021ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಸಹೋದರರು : ✦ ಅಂದನೂರು ಮುರುಗೇಶಪ್ಪ ✦ ಅಂದನೂರು ಬಾಬಣ್ಣ
✦ ಅಂದನೂರು ಮುಪ್ಪಣ್ಣ ✦ ಅಂದನೂರು ಮಲ್ಲಿಕಾರ್ಜುನ್
ಸಹೋದರಿ : ✦ ಶ್ರೀಮತಿ ಕೆ.ಸಿ.ಶಾಂತ ಚಂದ್ರಶೇಖರ್
ಅಂದನೂರು ಮತ್ತು ಬಾದಾಮಿ ಮನೆತನವರು
ಸಿ.ಆರ್. ಪ್ರಭಣ್ಣ ಅಂಡ್ ಸನ್ಸ್, ತುಮಕೂರು.

## ಅಧ್ಯಕ್ಷರಾಗಿ ದಾದಾಪೀರ್ ಮರು ಆಯ್ಕೆ



ದಾವಣಗೆರೆ ಲೋಕಲ್ ಮತ್ತು ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷರಾಗಿ
**ಎಂ. ದಾದಾಪೀರ್**
ಅವರು ಮರು ಆಯ್ಕೆ ಆಗಿದ್ದಾರೆ.

- ಗೌರವ ಅಧ್ಯಕ್ಷರಾಗಿ ಎಂ.ಡಿ. ಹಫೀಜುಲ್ಲಾ.
- ಉಪಾಧ್ಯಕ್ಷರುಗಳಾಗಿ ಎಸ್.ಆರ್. ಹನುಮಂತಪ್ಪ, ಅನ್ವರ್ ಸಾಬ್.
- ಕಾರ್ಯದರ್ಶಿಯಾಗಿ ಸೋಗಿ ಮುರಿಗೇಶ್.
- ಜಂಟಿ ಕಾರ್ಯದರ್ಶಿಗಳಾಗಿ ಎಸ್.ಆರ್. ಅಶು, ಅಕ್ರಮ್ ಬಾಷಾ.
- ಖಜಾಂಚಿಯಾಗಿ ಇಮಾಮ್ ಹುಸೇನ್.
- ಜಂಟಿ ಖಜಾಂಚಿಗಳಾಗಿ 140 ಮನ್ಸೂರ್ ಆಯ್ಕೆಯಾಗಿದ್ದಾರೆ.

ಹಿರಿಯ ಲಾರಿ ಮಾಲೀಕರಾದ ಅನ್ವರ್ ಸಾಬ್, ಮುನ್ನಾ ಸಾಬ್, ಅಬ್ದುಲ್ ಲತೀಫ್ ಮುಂತಾದವರ ಸಮ್ಮುಖದಲ್ಲಿ ಆಯ್ಕೆ ನಡೆಯಿತು. ಪದಾಧಿಕಾರಿಗಳಾದ ಅಹ್ಮದ್ ಷರೀಫ್, ಅಮ್ಜದ್, ಸಾಜೀದ್, ಸಿಕಂದರ್ ಇದ್ದರು.






## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ಮಾಲತೇಶ ಪ್ರಸನ್ನ ||  || ಶ್ರೀ ಯಲ್ಲಮ್ಮದೇವಿ ಪ್ರಸನ್ನ ||

ದಾವಣಗೆರೆ ತಾಲ್ಲೂಕು, ತುಂಗಭದ್ರ ಬಡಾವಣೆ (KHB) ಹೊಸ ಕುಂದುವಾಡ ವಾಸಿಗಳಾದ
**ಶ್ರೀಮತಿ ಪಾರ್ವತಿ ಮೋಹನ್‌ಕುಮಾರ್ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.

ನನ್ನ ಪೂಜ್ಯ ಪತಿಯವರಾದ



ಜನನ : 20-07-1975

ನಿಧನ : 10-08-2021

### ಶ್ರೀ ಮೋಹನ್‌ಕುಮಾರ್ ಕೆ.ಸಿ.

(ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ರಟ್ಟಿಹಳ್ಳಿ, ಹಾವೇರಿ ಜಿಲ್ಲೆ)

ಇವರು ದಿನಾಂಕ 10.08.2021ರ ಬುಧವಾರ ರಾತ್ರಿ 10-37 ಗಂಟೆಗೆ
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 18-08-2021ನೇ ಬುಧವಾರ ಬೆಳಗ್ಗೆ 11.30 ಗಂಟೆಗೆ ದಾವಣಗೆರೆಯ ಹೊಸಕುಂದುವಾಡ ಬಸವೇಶ್ವರ ಸ್ಕೂಲ್ ಹತ್ತಿರದ KHB 2ನೇ ಫೇಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವಿಶೇಷ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

ಮೊ. : 83102 46776, 94491 63356




# ಅರಸೀಕೆರೆ : ಪಂಚಾಯ್ತಿಗಳ ಅಭಿವೃದ್ಧಿಗೆ 4.5 ಕೋಟಿ ಬಿಡುಗಡೆ

ಹರಪನಹಳ್ಳಿ, ಆ.17- ಜಗಳೂರು ವಿಧಾನಸಭಾ ಕ್ಷೇತ್ರದ ಅರಸೀಕೆರೆಯ ಏಳು ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಸಿ.ಸಿ. ರಸ್ತೆ, ಸಮುದಾಯ ಭವನ ಸೇರಿದಂತೆ ಸಮಗ್ರ ಅಭಿವೃದ್ಧಿಗಾಗಿ 4.5 ಕೋಟಿ ರೂ. ವೆಚ್ಚದಲ್ಲಿ ವಿವಿಧ ಪ್ರಗತಿಪರ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಗಳೂರು ಶಾಸಕ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ಹೇಳಿದರು.

ತಾಲ್ಲೂಕಿನ ಉಚ್ಚಂಗಿದುರ್ಗದಲ್ಲಿ 60.44 ಲಕ್ಷ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ, 14 ಲಕ್ಷ ರೂ. ವೆಚ್ಚದಲ್ಲಿ ಅಂಗನವಾಡಿ ಕೇಂದ್ರ, 20 ಲಕ್ಷ ರೂ. ವೆಚ್ಚದಲ್ಲಿ ವಸತಿ ಗೃಹಗಳ ಭೂಮಿ ಪೂಜೆ, ಪುಣಭಗಟ್ಟಿ ಗ್ರಾಮದಿಂದ ಚನ್ನಾಪುರದವರೆಗೆ 55 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಅರಸೀಕೆರೆಯಲ್ಲಿ 1.10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಬಸ್ ನಿಲ್ದಾಣದ ಭೂಮಿ ಪೂಜೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ಕೊರೊನಾ ಸಂದಿಗ್ಧ ಪರಿಸ್ಥಿತಿಯ ನಡುವೆಯೂ ಬಿಜೆಪಿ ಸರ್ಕಾರ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ, ಜನಪರ ಕಾಳಜಿ ಮೆರೆದಿದೆ ಎಂದರು.

ಐತಿಹಾಸಿಕ ಉಚ್ಚಂಗಿದುರ್ಗವನ್ನು ಮುಂದಿನ ದಿನಗಳಲ್ಲಿ ಪ್ರವಾಸಿ ತಾಣವಾಗಿಸಲು ಹಾಲಮ್ಮನ ತೋಪಿನಲ್ಲಿ ಸಮುದಾಯ ಭವನ ಮತ್ತು ಅರಸಿಕೆರೆ ಗ್ರಾಮವನ್ನು ಸ್ವಚ್ಛ ಹಾಗೂ ಸುಂದರ ಗ್ರಾಮವನ್ನಾಗಿ



ಮಾಡುತ್ತೇನೆ ಎಂದು ತಿಳಿಸಿದ ಅವರು, ನಾಡ ಕಛೇರಿ ಸೇರಿದಂತೆ ಹೋಬಳಿ ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಕಛೇರಿಗಳಿಗೆ ಸೂಕ್ತ ಸ್ಥಳ ಗುರುತಿಸಿ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕೋವಿಡ್‌ನಿಂದಾಗಿ ಸಂಕಷ್ಟದಲ್ಲಿರುವ ಕಾರ್ಮಿಕ ಮತ್ತು ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸಾಮಾಜಿಕ ಭದ್ರತೆಯ ಅಡಿಯಲ್ಲಿ 80 ಸಾವಿರ ಕಿಟ್‌ಗಳು ಬಂದಿದ್ದು, ಉಚ್ಚಂಗಿದುರ್ಗ ಮತ್ತು ಅರಸಿಕೆರೆ ಗ್ರಾಮಗಳಲ್ಲಿ ಈಗಾಗಲೇ 4,000 ಸಾವಿರ ಕಿಟ್ ವಿತರಿಸಲಾಗಿದ್ದು, ಉಳಿದ ಎಲ್ಲಾ ಕಾರ್ಮಿಕರಿಗೆ ಹಂತ ಹಂತವಾಗಿ ವಿತರಿಸುವಂತೆ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ

### ಹರಪನಹಳ್ಳಿ ಕ್ಷೇತ್ರದ ಕಾರ್ಯಕ್ರಮದಲ್ಲಿ ಜಗಳೂರು ಶಾಸಕ ಎಸ್.ವಿ.ರಾಮಚಂದ್ರ

ಮುಕ್ತಾಯದ ಹಂತದಲ್ಲಿದ್ದು, ಶೀಘ್ರದಲ್ಲೇ ಜಲಸಂಪನ್ಮೂಲ ಸಚಿವರನ್ನೊಳಗೊಂಡಂತೆ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ, ಹರಪನಹಳ್ಳಿ ಶಾಸಕ ಜಿ. ಕರುಣಾಕರ ರೆಡ್ಡಿ ಸಮ್ಮುಖದಲ್ಲಿ ಉದ್ಘಾಟನೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿ.ಪಂ. ಸದಸ್ಯ ಡಿ. ಸಿದ್ದಪ್ಪ, ತಾ.ಪಂ. ಸದಸ್ಯ ಬೇವಿನಹಳ್ಳಿ ಕೆಂಚನಗೌಡ, ಗ್ರಾ.ಪಂ. ಅಧ್ಯಕ್ಷ ಡಿ.ಅಕ್ಕಮ್ಮ, ಸದಸ್ಯೆ ವಿಶಾಲಾಕ್ಷಮ್ಮ, ಮುಖಂಡರಾದ ಚಟ್ನಿಹಳ್ಳಿ ರಾಜಣ್ಣ, ವಕೀಲ ವಿಶ್ವನಾಥಯ್ಯ, ಮಂಜುನಾಥ್, ನಿಂಗಪ್ಪ, ಕೆ. ಮಂಜಪ್ಪ, ಬಾಲೇನಹಳ್ಳಿ ಜಿ. ಕೆಂಚನಗೌಡ, ಫಣಿಯಾಪುರ ಲಿಂಗರಾಜ್, ಮೆಹಬೂಬ್ ಸಾಬ್, ಸತ್ತಾರ್ ಸಾಬ್, ದುರ್ಗೇಶ್ ಪೂಜಾರ್, ಅಣಜಿಗೆರೆ ನಾಗ ರಾಜ್, ಡಿ. ಲಕ್ಷ್ಮಣ, ಉಪ ತಹಶೀಲ್ದಾರ್ ಫಾತಿಮಾ, ಕಾರ್ಮಿಕ ಇಲಾಖೆ ಅಧಿಕಾರಿ ಇಬ್ರಾಹಿಂ, ಕಾರ್ಮಿಕ ಮುಖಂಡ ಗುಡಿಹಳ್ಳಿ ಹಾಲೇಶ್, ಅರಸೀಕೆರೆ ಪಿಡಿಓ ಅಂಜಿನಪ್ಪ, ಉಚ್ಚಂಗಿದುರ್ಗ ಪಿಡಿಓ ಉಮೇಶ್ ಇನ್ನಿತರರಿದ್ದರು.

## ರಾಜನಹಳ್ಳಿ ಶ್ರೀಗಳಿಂದ ಇಂದು ಮುಖ್ಯಮಂತ್ರಿ ಬೊಮ್ಮಾಯಿ ಭೇಟಿ



ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದ ನಿಯೋಗವು ಇಂದು ಮಧ್ಯಾಹ್ನ 3.30 ಕ್ಕೆ ಬೆಂಗಳೂರಿನ 'ಕೃಷ್ಣಾ'ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಎಸ್ಟಿಗೆ ಪ್ರತ್ಯೇಕ ಸಚಿವಾಲಯ ರಚಿಸಲು ತೀರ್ಮಾನಿಸಿರುವುದಕ್ಕೆ ಅಭಿನಂದಿಸಿ, ನಂತರ ಎಸ್ಟಿ ಮೀಸಲಾತಿ ಪ್ರಮಾಣವನ್ನು ಶೇ. 7.5 ಕ್ಕೆ ಹೆಚ್ಚಿಸುವುದು ಸೇರಿದಂತೆ ಇತರೆ ವಿಷಯಗಳನ್ನು ಚರ್ಚಿಸಲಿದ್ದಾರೆ. ನಿಯೋಗದಲ್ಲಿ ಸಚಿವರಾದ ಶ್ರೀರಾಮುಲು ಸೇರಿದಂತೆ ಸಮಾಜದ ಸಂಸದರು, ಶಾಸಕರು, ಮುಖಂಡರು ಭಾಗವಹಿಸಲಿದ್ದಾರೆ.

## ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ ಇಂದು ಸಂಸದರ ಪ್ರವಾಸ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಿಂಡಸಕಟ್ಟೆ ಗ್ರಾಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪಂಚ ದೇವಸ್ಥಾನಗಳ ಪ್ರಾರಂಭೋತ್ಸವ, ಶಿಲಾಮೂರ್ತಿ ಪ್ರತಿಷ್ಠಾಪನೆ, ಗೋಪುರ ಕಳಸಾರೋಹಣ, ಕುಂಭಾಭೀಷೇಕ ಮತ್ತಿತರೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ನಂತರ ಮಧ್ಯಾಹ್ನ 3 ಗಂಟೆಗೆ ದಾವಣಗೆರೆಯಲ್ಲಿ ಬಿಜೆಪಿ ವತಿಯಿಂದ ಏರ್ಪಡಿಸಿರುವ ಜನಾಶೀರ್ವಾದ ಯಾತ್ರೆಯ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಪುಣೆಯಲ್ಲಿ ಮೋದಿ ದೇವಾಲಯ

ಪುಣೆ, ಆ. 17 – ಇಲ್ಲಿನ ಬಿಜೆಪಿ ಕಾರ್ಯಕರ್ತರೊಬ್ಬರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ದೇವಸ್ಥಾನವೊಂದನ್ನು ನಿರ್ಮಿಸಿದ್ದು, ಅಲ್ಲಿ ಮೋದಿ ಪ್ರತಿಮೆಯೊಂದನ್ನು ಇರಿಸಿದ್ದಾರೆ.



ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಿದ ಕಾರಣಕ್ಕಾಗಿ ಪ್ರಧಾನ ಮಂತ್ರಿ ಹೆಸರಿನಲ್ಲಿ ಮಂದಿರ ನಿರ್ಮಿಸಿರುವುದಾಗಿ 37 ವರ್ಷದ ಮಯೂರ್ ಮುಂಡೆ ಹೇಳಿದ್ದಾರೆ.

ಪುಣೆಯ ಔಂಧ್ ಪ್ರದೇಶದಲ್ಲಿ ಅವರು ಸಣ್ಣ ದೇವಾಲಯ ನಿರ್ಮಿಸಿದ್ದಾರೆ. ಪ್ರಧಾನಿಯಾದ ನಂತರ ಮೋದಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಸಂವಿಧಾನದ 370ನೇ ವಿಧಿ ರದ್ದುಗೊಳಿಸಿದ್ದಾರೆ, ರಾಮ ಮಂದಿರ ನಿರ್ಮಿಸಿದ್ದಾರೆ ಹಾಗೂ ತ್ರಿವಳಿ ತಲಾಕನ್ನು ಯಶಸ್ವಿಯಾಗಿ ರದ್ದುಗೊಳಿಸಿದ್ದಾರೆ ಎಂದು ಮುಂಡೆ ಹೇಳಿದ್ದಾರೆ.

ರಿಯಲ್ ಎಸ್ಟೇಟ್ ಏಜೆಂಟ್ ಆಗಿರುವ ಮುಂಡೆ, ರಾಮ ಮಂದಿರ ನಿರ್ಮಿಸಿದವರಿಗೆ ಒಂದು ದೇವಾಲಯ ಇರಬೇಕು ಎಂದು ಭಾವಿಸಿದ್ದೆ. ನನ್ನದೇ ಜಾಗದಲ್ಲಿ ದೇವಾಲಯ ಕಟ್ಟಿದ್ದೇನೆ. ಈ ದೇವಾಲಯ ನಿರ್ಮಿಸಲು 1.6 ಲಕ್ಷ ರೂ. ವೆಚ್ಚವಾಗಿದೆ ಎಂದು ಹೇಳಿದ್ದಾರೆ.

# ಹರಪನಹಳ್ಳಿ : ಸಸಿಗಳ ನೆಡುವ ಕಾರ್ಯಕ್ರಮ



ಹರಪನಹಳ್ಳಿ, ಆ.17- ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಕ್ರೀಡಾಂಗಣದ ಆವರಣದಲ್ಲಿ ಅರಣ್ಯ ಇಲಾಖೆ ಯಿಂದ 75 ಗಿಡಗಳನ್ನು ನೆಡುವುದಕ್ಕೆ ಉಪವಿಭಾಗಾ ಧಿಕಾರಿ ಚಂದ್ರಶೇಖರಯ್ಯ ಹೆಚ್.ಜಿ. ಚಾಲನೆ ನೀಡಿದರು.

ಈ ವೇಳೆ ಡಿವೈಎಸ್ಪಿ ವಿ.ಎಸ್. ಹಾಲುಮೂರ್ತಿ ರಾವ್, ವಲಯ ಅರಣ್ಯಾಧಿಕಾರಿ ಭರತ್ ಡಿ. ತಳವಾರ್, ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಉಪಾಧ್ಯಕ್ಷರಾದ ನಿಟ್ಟೂರು ಭೀಮವ್ವ, ತಹಶೀಲ್ದಾರ್ ನಂದೀಶ್ ಎಲ್.ಎಂ, ಕಾರ್ಯ ನಿರ್ವಾಹಣಾಧಿಕಾರಿ ಕೆ.ಆರ್. ಪ್ರಕಾಶ್, ಪುರಸಭೆ ಮುಖ್ಯಾಧಿಕಾರಿ ಯರಗುಡಿ ಶಿವಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ ವೀರಭದ್ರಯ್ಯ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ ಗೊಂದಿ, ನೌಕರರ ಸಂಘದ ಅಧ್ಯಕ್ಷ ಕೆ.ಸಿದ್ದಲಿಂಗನಗೌಡ, ಸಮಾಜ ಕಲ್ಯಾಣ ಅಧಿಕಾರಿ ಆನಂದ ಯು. ಡೊಳ್ಳಿನ, ಪುರಸಭೆ ಸದಸ್ಯರಾದ ಜಾಕೀರ್ ಹುಸೇನ್, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ಸಿಪಿಐ ನಾಗರಾಜ್ ಕಮ್ಮಾರ, ಪಿಎಸ್‌ಐ ಸಿ. ಪ್ರಕಾಶ್, ತಾಲ್ಲೂಕು ಆರೋಗ್ಯಾಧಿಕಾರಿ ದೇವರಾಜ್, ಮೀನುಗಾರಿಕೆ ಇಲಾಖೆಯ ಮಂಜುಳಾ ಆರ್.ಐ. ಎಸ್ ಅರವಿಂದ್ ಸೇರಿದಂತೆ ಇತರರಿದ್ದರು.

## 14 ಪಾಸಿಟಿವ್, 7 ಗುಣಮುಖ

ದಾವಣಗೆರೆ, ಆ.17- ಜಿಲ್ಲೆಯಲ್ಲಿ ಇಂದು 14 ಜನರಲ್ಲಿ ಕೊರೊನಾ ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. 7 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 9, ಚನ್ನಗಿರಿ 1, ಹೊನ್ನಾಳಿ 1 ಹಾಗೂ ಹೊರ ಜಿಲ್ಲೆಯ ಮೂವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 189 ಸಕ್ರಿಯ ಪ್ರಕರಣಗಳಿವೆ.

## ಹೆಚ್.ಡಿ.ಎಫ್.ಸಿ. ಕ್ರೆಡಿಟ್ ಕಾರ್ಡ್ : ನಿರ್ಬಂಧ ತೆರವು

ಮುಂಬೈ, ಆ. 17 – ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹೊಸ ಕ್ರೆಡಿಟ್ ಕಾರ್ಡ್ ಮಾರುವುದರ ಮೇಲೆ ಹೇರಿದ್ದ ನಿರ್ಬಂಧವನ್ನು ಆರ್.ಬಿ.ಐ ತೆರವುಗೊಳಿಸಿದೆ. ಎಂಟು ತಿಂಗಳ ಹಿಂದೆ ಬ್ಯಾಂಕ್ ಮೇಲೆ ನಿರ್ಬಂಧ ಹೇರಲಾಗಿತ್ತು.

ಆದರೂ, ಬ್ಯಾಂಕ್ ಹೊಸ ತಂತ್ರಜ್ಞಾನದ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಇರುವ ನಿರ್ಬಂಧಗಳು ಮುಂದುವರೆದಿವೆ ಎಂದು ಮೂಲಗಳು ತಿಳಿಸಿವೆ. ಹೆಚ್.ಡಿ.ಎಫ್.ಸಿ. ಬ್ಯಾಂಕ್‌ನಲ್ಲಿ ಪದೇ ಪದೇ ತಾಂತ್ರಿಕ ತೊಡಕುಗಳು ಕಂಡು ಬಂದಿದ್ದವು. ಈ ಹಿನ್ನೆಲೆಯಲ್ಲಿ ಬ್ಯಾಂಕ್ ಹೊಸ ಕ್ರೆಡಿಟ್ ಕಾರ್ಡ್ ನೀಡುವುದರ ಮೇಲೆ ನಿರ್ಬಂಧ ಹೇರುವ ಅಭೂತಪೂರ್ವ ಕ್ರಮ ತೆಗೆದುಕೊಳ್ಳಲಾಗಿತ್ತು. ಆದರೆ, ಹಾಲಿ ಇರುವ ಗ್ರಾಹಕರ ಮೇಲೆ ನಿರ್ಬಂಧ ಹೇರಿರಲಿಲ್ಲ.

## ತಾಂಡಾಭಿವೃದ್ಧಿ ನಿಗಮ : ಅರ್ಜಿ

ದಾವಣಗೆರೆ, ಆ.17- ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಯಡಿ ಸಾಲ ಮತ್ತು ಸಹಾಯಧನ ಸೌಲಭ್ಯ ಕಲ್ಪಿಸಲು ಬಂಜಾರ ಅಥವಾ ಲಂಬಾಣಿ ಸಮುದಾಯದಿಂದ ಅರ್ಜಿ ಕರೆಯಲಾಗಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 5 ಕೊನೆಯ ದಿನವಾಗಿದ್ದು, ನಿಗಮದ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು.

# ಸ್ಥಳೀಯ ಸಂಸ್ಥೆಗಳು ಸರ್ಕಾರಿ ಶಾಲೆಗಳ ಪಾಠೋಪಕರಣಕ್ಕೆ ಅನುದಾನ ನೀಡಬೇಕು

ಹರಿಹರ, ಆ.17 - ಸರ್ಕಾರಿ ಶಾಲೆಗಳಿಗೆ ಸ್ಥಳೀಯ ಸಂಸ್ಥೆಗಳಾದ ಗ್ರಾಪಂ, ತಾಪಂ, ಜಿಪಂ, ಪಪಂ, ಪುರಸಭೆ, ನಗರಸಭೆ, ಪಾಲಿಕೆಗಳಿಂದ ಪಾಠೋಪಕರಣಕ್ಕಾಗಿ ಅನುದಾನವನ್ನು ಆದ್ಯತೆ ಮೇರೆಗೆ ನೀಡಬೇಕೆಂದು ಬಿಇಒ ಬಿ.ಸಿ. ಸಿದ್ದಪ್ಪ ಹೇಳಿದರು.

ತಾಲ್ಲೂಕಿನ ಧೂಳೆಹೊಳೆ ಗ್ರಾಮದ ಸ.ಹಿ.ಪ್ರಾ. ಶಾಲೆಗೆ ಗ್ರಾ.ಪಂ. ನಿಂದ ನೀಡಿದ 80 ಸಾವಿರ ರೂ. ಮೌಲ್ಯದ 50 ಇಂಚಿನ ಟಿವಿ ಹಾಗೂ ಕೆನಾನ್ ಪ್ರಿಂಟರ್ ಉಪಕರಣಗಳನ್ನು ಸ್ವೀಕರಿಸಿ ಅವರು ಮಾತನಾಡಿದರು.

ಆಯಾ ಭಾಗದ ಸರಕಾರಿ ಶಾಲೆಗಳ ಅಭಿವೃದ್ಧಿಯ ಜವಾಬ್ದಾರಿ ಸ್ಥಳೀಯ ಸಂಸ್ಥೆಗಳ ಮೇಲಿದೆ ಎಂದರು. ಇತ್ತೀಚಿಗೆ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಇಲಾಖೆಯಿಂದ ಮಹತ್ವದ ಸುತ್ತೋಲೆ ಹೊರಡಿಸಲಾಗಿದೆ. ಆ ಪ್ರಕಾರ ಆಯಾ ಗ್ರಾ.ಪಂ. ವ್ಯಾಪ್ತಿಯ ಸರಕಾರಿ ಶಾಲೆಗಳಿಗೆ ಗ್ರಾ.ಪಂ. ಪಿಡಿಒ, ಅಧ್ಯಕ್ಷರು, ಸದಸ್ಯರು ತಿಂಗಳಲ್ಲಿ ಎರಡು ಬಾರಿ ಭೇಟಿ ನೀಡಬೇಕು. ಕೊರತೆ ಇರುವ ಭೌತಿಕ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಬೇಕು ಎಂದರು.

ಗ್ರಾ.ಪಂ. ಕಾರ್ಯದರ್ಶಿ ಮೌನೇಶಾಚಾರ್ ಮಾತನಾಡಿ, 15ನೇ ಹಣಕಾಸು ಯೋಜನೆಯಡಿ ಈ ಶಾಲೆಗೆ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಅನುದಾನ ನೀಡುತ್ತೇವೆ. ಶಾಲೆ ಸುತ್ತಲೂ ಸ್ವಚ್ಛ, ನೈರ್ಮಲ್ಯಯುತ ವಾತಾವರಣ ಸೃಷ್ಟಿಸುತ್ತೇವೆ ಎಂದರು.



### ಹರಿಹರದ ಬಿಇಒ ಬಿ.ಸಿ. ಸಿದ್ದಪ್ಪ ಮನವಿ

ಸಿಆರ್‌ಪಿ ಮಂಜುನಾಥ್ ಮಾತನಾಡಿ, ಸರಕಾರಿ ಶಾಲೆಗಳು ಅಭಿವೃದ್ಧಿಯಾದರೆ ಬಡ, ಮಧ್ಯಮ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಶಾಲಾಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳ ಜೊತೆಗೆ ಹಳೆ ವಿದ್ಯಾರ್ಥಿಗಳು, ದಾನಿಗಳ ಸಹಕಾರ ಅಗತ್ಯವಾಗಿದೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್. ನಿಜಲಿಂಗಪ್ಪ ಮಾತನಾಡಿ, ಶಾಲೆಯ ನಾಲ್ಕು ಗೋಡೆಗಳ ಮಧ್ಯೆ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆ ನಡೆಯುತ್ತದೆ ಎಂದು ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಹೇಳಿರುವುದು ಶಾಲೆಗಳ ಮಹತ್ವವನ್ನು ಸಾರುತ್ತದೆ. ಸರ್ಕಾರಿ ಶಾಲೆಗಳು ಬಲಗೊಂಡರೆ ದೇಶವು ದೃಢವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ನಂದಿಗಾವಿ ಗ್ರಾ.ಪಂ. ಅಧ್ಯಕ್ಷೆ ಶಾರದಮ್ಮ, ಉಪಾಧ್ಯಕ್ಷೆ ಗೀತಮ್ಮ, ಸದಸ್ಯರಾದ ಚನ್ನಯ್ಯ ಸ್ವಾಮಿ, ಮುಖ್ಯ ಶಿಕ್ಷಕ ಎ. ಬಸವರಾಜ್, ಸರ್ಕಾರಿ ನೌಕರರ ಸಂಘದ ಖಜಾಂಚಿ ಶಿವಮೂರ್ತಿ, ಶಿಕ್ಷಕರ ಸಂಘದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಶರಣಕುಮಾರ ಹೆಗಡೆ, ಉಮೇಶ್, ಕೆ. ಮಂಗಳ, ಲೈಕಾ ಬಾನು, ಟಿ.ವಿ. ಹೇಮಾ ಇನ್ನಿತರರಿದ್ದರು.

# ಮಾಯಕೊಂಡ ತಾಲ್ಲೂಕು ರಚನೆಗೆ ಶಾಸಕರು ಒತ್ತಡ ಹೇರಬೇಕು

ದಾವಣಗೆರೆ, ಆ.17- ಮಾಯಕೊಂಡವನ್ನು ತಾಲ್ಲೂಕು ಮಾಡುವಂತೆ ಮುಖ್ಯಮಂತ್ರಿಗಳಿಗೆ ಶಾಸಕರು ಒತ್ತಡ ಹೇರುವಂತೆ ಮಾಯಕೊಂಡ ಪುರ ಅಭಿವೃದ್ಧಿ ಕ್ರಿಯಾಶೀಲ ವೇದಿಕೆ ಹಾಗೂ ಮಾಯಕೊಂಡ ತಾಲ್ಲೂಕು ಹೋರಾಟ ಸಮಿತಿಯು ಶಾಸಕ ಪ್ರೊ. ಲಿಂಗಣ್ಣ ಅವರಿಗೆ ಮನವಿ ಮಾಡಿತು.

ಈಗಲಾದರೂ ಕಂದಾಯ ಸಚಿವ ಆರ್. ಅಶೋಕ್‌ರವರಿಂದ ಬಂದ ಪತ್ರಕ್ಕೆ ಮೊದಲು ಮಾಯಕೊಂಡ ಹೋಬಳಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿಕೊಡುವ ಬಗ್ಗೆ ಶಿಫಾರಸ್ಸು

### ರೈತ ಮುಖಂಡ ಎಂ.ಎಸ್.ಕೆ. ಶಾಸ್ತ್ರಿ ಮನವಿ

ಪತ್ರ ಬರೆಯುವಂತೆ ಜಿಲ್ಲಾಧಿಕಾರಿಯವರಿಗೆ ತಾವು ಒತ್ತಾಯ ಪಡಿಸಿರಿ ಎಂಬುದಾಗಿ ಜನತೆ ಆಗ್ರಹಪಡಿಸಿದರು. ಇದಕ್ಕೆ ಉತ್ತರಿಸಿದ ಲಿಂಗಣ್ಣನವರು, ನಾನೂ ಸಹ ಈ ಬಗ್ಗೆ ಪ್ರಯತ್ನ ಪಡುತ್ತಿದ್ದೇನೆ ಎಂದರು.

ನಿಯೋಗದಲ್ಲಿ ಮಾಯಕೊಂಡ ತಾಲ್ಲೂಕು ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ, ಬಿ.ಕೆ. ಬೀರಪ್ಪ, ಗೌಡರ ಅಶೋಕ, ರಾಮಜೋಗಿ ಪ್ರಭು, ಗಾಳೇರ ಚಂದ್ರಪ್ಪ, ಎಸ್.ಜಿ. ರುದ್ರೇಶ್, ಅಶೋಕ್, ಮಾನಮ್ಮ ಆಚಾರ್, ಕೋಳಿ ರಂಗಸ್ವಾಮಿ ನಾಯಕ, ಗಂಟೆಪ್ಪಳ ನಿಜಗುಣಪ್ಪ, ಗುಡ್ಲು ತಿಪ್ಪೇಸ್ವಾಮಿ, ಬಿ.ಸಿ. ಬಸವರಾಜಪ್ಪ, ಭಾಗವ್ವರ ಹನುಮಂತಪ್ಪ, ಹೊಳಿಯಪ್ಪಳ ಮಲ್ಲಪ್ಪ, ಮಾಜಿ ಅಧ್ಯಕ್ಷ ಹನುಮಂತಪ್ಪ, ಮಹಮ್ಮದ್ ಫಾರೂಕ್ ಇನ್ನಿತರರಿದ್ದರು.

# ಹೊಳೆಮಠದಿಂದ ಸಿದ್ಧಾರೂಢ ಮಠಕ್ಕೆ ಬಸ್ ಪ್ರಾರಂಭ

ರಾಣೇಬೆನ್ನೂರು, ಆ.17- ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯು ಕೊರೊನಾ ಸಂಕಷ್ಟದಿಂದ ಸುಮಾರು 12 ಸಾವಿರ ಕೋಟಿಗೂ ಅಧಿಕ ನಷ್ಟದಲ್ಲಿದ್ದರೂ ಸಹ, ಸೇವೆಯನ್ನೇ ಗುರಿಯಾಗಿಸಿಕೊಂಡಿರುವ ಸಂಸ್ಥೆ ಸಾರ್ವಜನಿಕರ ಸೇವೆಯಿಂದ ಹಿಂದೆ ಸರೆಯುವುದಿಲ್ಲ ಎಂದು ಸಂಸ್ಥೆಯ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ಹೇಳಿದರು.

ಪ್ರತಿದಿನ ಐರಣಿ ಹೊಳೆಮಠದಿಂದ ಹುಬ್ಬಳ್ಳಿ ಸಿದ್ಧಾರೂಢ ಮಠಕ್ಕೆ ಸಂಚರಿಸುವ ಸಂಸ್ಥೆಯ ಬಸ್‌ಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ತಮ್ಮ ಜೀವದ ಹಂಗು ತೊರೆದು ಎಲ್ಲ ಸಮಯದಲ್ಲೂ ಕರ್ತವ್ಯ ನಿರ್ವಹಿಸಿದ ನೌಕರರ ಸಂಬಳವನ್ನು ಸಾಲ ಮಾಡಿ ಕೊಡಲಾಗಿದೆ. ಎಲ್ಲೆಡೆ ನಮ್ಮ ಸಂಸ್ಥೆಯ ಬಸ್‌ಗಳಲ್ಲಿ ಸಂಚರಿಸಿ, ಸಂಸ್ಥೆಯನ್ನು ಉಳಿಸಿ, ಬೆಳೆಸುವಂತೆ ಸಾರ್ವಜನಿಕರಿಗೆ ಕೇಲಗಾರ ಮಾಡಿದ ಮನವಿಯನ್ನು ಸಂಸ್ಥೆಯ ನಿರ್ದೇಶಕ ಸಂತೋಷ ಪಾಟೀಲ ಸಹ ಪುನರುಚ್ಚರಿಸಿದರು. ಭೂಮಿ ಮೇಲಿನ ಪ್ರತಿಯೊಂದು ಜೀವಿಯು ಒಂದಿಲ್ಲೊಂದು ರೀತಿಯಲ್ಲಿ ಪರೋ ಪಕಾರ ಮಾಡುವುದ ರೊಂದಿಗೆ ಬದುಕನ್ನು ಸಾರ್ಥಕ ಮಾಡಿಕೊಳ್ಳುವಂತೆ, ಅಧ್ಯಾತ್ಮದ ಬದುಕಿಗೆ ಅಂಟಿಕೊಂಡಿರುವ ಉಭಯ ಮಠಗಳ ಭಕ್ತರಿಗೆ ಸಹಾಯ ಕಲ್ಪಿಸುವ ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ತನ್ನೆಲ್ಲಾ ಸಂಕಷ್ಟಗಳಿಂದ ಮುಕ್ತಿಗೊಳ್ಳಲಿ. ಎಲ್ಲ ಜನರು ಈ ಬಸ್‌ಗಳಲ್ಲಿ ಸಂಚರಿಸಿ ಸಹಕಾರಿಗಳಾಗಲಿ ಎಂದು ಸಾನ್ನಿಧ್ಯ ವಹಿಸಿದ್ದ ಪೀಠಾಧಿಪತಿ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮೀಜಿ ಹರಸಿದರು.

ಐರಣಿಗೆ ಬರುವ ಎಲ್ಲಾ ಬಸ್‌ಗಳನ್ನು ಮಠದವರೆಗೆ ಬಿಡುವಂತೆ ಪ್ರಾಸ್ತಾವಿಕ ಮಾತುಗಳನ್ನಾಡಿದ ಮಠದ ಸಂಚಾಲಕ ಬಾಬು ಶೆಟ್ಟರ್ ಮನವಿ ಮಾಡಿ ಕಾರ್ಯಕ್ರಮ ನಿರೂಪಿಸಿದರು.



### ಬಸ್‌ನಲ್ಲಿ ಭಜನೆ....

ಈ ಮಾರ್ಗದಲ್ಲಿ ಸಂಚರಿಸಲು ಒಂದು ಬಸ್ ಅನ್ನು ಸೀಮಿತಗೊಳಿಸಿದಲ್ಲಿ ಅದರಲ್ಲಿ ಧ್ವನಿವರ್ಧಕ ಅಳವಡಿಸಿ, ಆರೂಢ ಪರಂಪರೆಯ ತತ್ವಾದರ್ಶಗಳ ಹಾಗೂ ಭಜನೆ ಪ್ರಸಾರ ಮಾಡುವ ಮತ್ತು ವಿಶಿಷ್ಟ ರೀತಿಯಲ್ಲಿ ಶೃಂಗರಿಸುವ ಕಾರ್ಯವನ್ನು ಮಠದಿಂದ ಮಾಡಲಾಗುವುದು. ಇದರಲ್ಲಿ ಸಂಚರಿಸುವವರಿಗೆ ಮನೋಲ್ಲಾಸ ಉಂಟಾಗುವುದು ಎಂದು ಬಾಬು ತಿಳಿಸಿದರು.

# ನಂದಿ ಸೌಹಾರ್ದದಿಂದ ಭದ್ರೆಗೆ ಬಾಗಿನ



ಮಲೇಬೆನ್ನೂರು, ಆ.17 - ಪಟ್ಟಣದ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತದ ವತಿಯಿಂದ ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಮಂಗಳವಾರ ಬಾಗಿನ ಅರ್ಪಿಸಲಾಯಿತು.

ಸಹಕಾರಿ ಅಧ್ಯಕ್ಷ ಹಳ್ಳಿಹಾಳ್ ವೀರನಗೌಡ, ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ, ನಿರ್ದೇಶಕರಾದ ಹಳ್ಳಿಹಾಳ್ ಹೆಚ್.ಟಿ. ಪರಮೇಶ್ವರಪ್ಪ, ಎ.ಕೆ. ತಿಪ್ಪೇಶಪ್ಪ, ಕೊಕ್ಕನೂರಿನ ಬಿ.ಹೆಚ್. ರವಿ, ಟಿ. ರಾಮಚಂದ್ರಪ್ಪ, ಕೆ.ಪಿ. ಆಂಜನೇಯ ಪಾಟೀಲ್, ಹಿಂಡಸಘಟ್ಟಿಯ ಶ್ರೀಮತಿ ಭಾಗ್ಯ ಉದಯಗೌಡ, ಮಲೇಬೆನ್ನೂರಿನ ಎ. ಆರೀಫ್ ಅಲಿ, ಸಿಇಓ ಹೆಚ್.ಎಂ. ಬಸವರಾಜ್, ಕಾನೂನು ಸಲಹೆಗಾರ ನಂದಿತಾವರೆ ತಿಮ್ಮನಗೌಡ, ಸಿಬ್ಬಂದಿಗಳಾದ ಜಿ.ಎಂ. ನಾಗನಗೌಡ ರುದ್ರಗೌಡ, ಸುಮಾ, ಸುಭಾಷ್ ಮತ್ತಿತರರು ಭಾಗವಹಿಸಿದ್ದರು.

## ಹರಿಹರ ಎಪಿಎಂಸಿಯಿಂದ ಭದ್ರಾ ಡ್ಯಾಂಗೆ ಬಾಗಿನ



ಹರಿಹರ, ಆ.17- ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಹರಿಹರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಮಂಗಳವಾರ ಗಂಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು. ಸಮಿತಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಉಪಾಧ್ಯಕ್ಷ ಕೊಕ್ಕನೂರಿನ ಬಸವರಾಜ್, ಸದಸ್ಯರಾದ ಬೆಳ್ಳೂಡಿ ನರೇಂದ್ರ, ಜಿಗಳಿಯ ಶ್ರೀಮತಿ ಈರಮ್ಮ ರುದ್ರಗೌಡ, ಗುತ್ತೂರಿನ ಮಂಜಪ್ಪ ಮತ್ತು ಸಿಬ್ಬಂದಿ ವರ್ಗದವರು ಈ ವೇಳೆ ಹಾಜರಿದ್ದರು.

## ಒಂದೇ ದಿನ 88.13 ಲಕ್ಷ ಜನರಿಗೆ ಲಸಿಕೆ

ನವದೆಹಲಿ, ಆ. 17 – ನಿನ್ನೆ ಸೋಮವಾರದಂದು ದೇಶದಲ್ಲಿ 88.13 ಲಕ್ಷ ಜನರಿಗೆ ಕೊರೊನಾ ಲಸಿಕೆ ನೀಡಲಾಗಿದೆ. ಒಂದೇ ದಿನ ಇಷ್ಟು ಪ್ರಮಾಣದ ಲಸಿಕೆ ದೇಶದಲ್ಲಿ ನೀಡಿರುವುದು ದಾಖಲೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಅತಿ ಹೆಚ್ಚಿನ ಪ್ರಮಾಣದ ಲಸಿಕೆ ನೀಡಿರುವುದು ವಿಶ್ವದಲ್ಲೇ ದಾಖಲೆಯಾಗಿದೆ ಎಂದಿದ್ದಾರೆ.ಇದುವರೆಗೂ ದೇಶದಲ್ಲಿ 55.47 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ದೇಶದ ಶೇ.45ರಷ್ಟು ವಯಸ್ಕರು ಒಂದು ಡೋಸ್ ಹಾಗೂ ಶೇ.13ರಷ್ಟು ಜನರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.


## ಭಾವಪೂರ್ಣ ಶ್ರದ್ಧಾಂಜಲಿ

ಬೆಂಗಳೂರಿನ ವಾಸಿ
ಶ್ರೀ ಸಿ.ಪಿ.ಪಂಚಾಕ್ಷರಿ
ಅವರ ಧರ್ಮಪತ್ನಿ
**ಶ್ರೀಮತಿ ಸಿ.ಪಿ. ಸುನಂದ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ



ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಂದನೂರು ಬಳಗ (ರಿ.) ದಾವಣಗೆರೆ.**


## ಭಾವಪೂರ್ಣ ಶ್ರದ್ಧಾಂಜಲಿ

**ಶರಣ ಎಚ್.ಎಂ. ಸ್ವಾಮಿ**
ಅವರು ಬಸವ ಬಳಗ (ರಿ.) ದಾವಣಗೆರೆಯ ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ಅವಿರತವಾದ ಸೇವೆ ಸಲ್ಲಿಸುತ್ತಾ ನಾಡಿನುದ್ದಕ್ಕೂ ಬಸವತತ್ವದ ಪ್ರಚಾರ ಆಚಾರ ಹಾಗೂ ಅದರ ಸಂರಕ್ಷಣೆಗಾಗಿ ಅನುಪಮ ಸೇವೆ ಸಲ್ಲಿಸಿ, ದಿ 15.8.3031 ರಂದು ಲಿಂಗೈಕ್ಯರಾಗಿದ್ದಾರೆ. ಅವರ ಲಿಂಗ ಕಾಯವನ್ನು ದರ್ಶನಕ್ಕಾಗಿ ಡಾ॥ ಮೋದಿ ರಸ್ತೆಯಲ್ಲಿರುವ ಅವರ ಸ್ವಗೃಹದಲ್ಲಿ ದಿನಾಂಕ 18.8.2021ರ ಬುಧವಾರ (ಇಂದು) ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ಘಂಟೆಯವರಿಗೆ ಇರಿಸಿ, ನಂತರ ಮಧ್ಯಾಹ್ನ 1 ಘಂಟೆಗೆ ದೊಡ್ಡಬಾತಿ-ಹರಿಹರ ರಸ್ತೆಯಲ್ಲಿರುವ ಅವರ ತೋಟದಲ್ಲಿ ಕ್ರಿಯಾ ಸಮಾಧಿ ಮಾಡಲಾಗುವುದು.



ಅಧ್ಯಕ್ಷರು ಮತ್ತು ಪದಾಧಿಕಾರಿಗಳು
**ಬಸವ ಬಳಗ (ರಿ) ದಾವಣಗೆರೆ. ಮೊ. : 9945221201**


### ಬಸಾಪುರದ ನರಗನಹಳ್ಳಿ ಮಠದ ಗುರುಸಿದ್ದಯ್ಯ ನಿಧನ



ದಾವಣಗೆರೆ ಸಿಟಿ, 21ನೇ ವಾರ್ಡ್ ಬಸಾಪುರ ವಾಸಿ ನರಗನಹಳ್ಳಿ ಮಠದ ದಿ.ಹಾಲಯ್ಯನವರ ಪುತ್ರ ಗುರುಸಿದ್ದಯ್ಯ (76) ಅವರು ದಿನಾಂಕ 17.08.2021 ನೇ ಮಂಗಳವಾರ ಮಧ್ಯಾಹ್ನ 3.20ಕ್ಕೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರರು, ಒಬ್ಬ ಪುತ್ರಿ, ಇಬ್ಬರು ಸಹೋದರರು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 18.08.2021 ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಬಸಾಪುರದ ರುದ್ರಭೂಮಿಯಲ್ಲಿ ನೆರವೇರಲಿದೆ.

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಆಗಸ್ಟ್ 18, 2021

## ಅನಧಿಕೃತ ಬಡಾವಣೆ ತೆರವಿಗೆ ನಿವೇಶನದಾರರ ವಿರೋಧ

### ಸಕ್ರಮಕ್ಕೆಗಡುವು ನೀಡಿದ ದೂಡಾ ಅಧ್ಯಕ್ಷ ಶಿವಕುಮಾರ್



ದಾವಣಗೆರೆ, ಆ.17 - ದೂಡಾ ವ್ಯಾಪ್ತಿಯಲ್ಲಿನ ಕೃಷಿ ಜಮೀನಿನಲ್ಲಿ ಭೂ ಪರಿವರ್ತಿಸದೇ, ನಿಯಮಾನುಸಾರವಾಗಿ ಉದ್ಯಾನವನ, ರಸ್ತೆ, ಚರಂಡಿಗೆ ಜಾಗ ಬಿಡದೇ ಅನಧಿಕೃತವಾಗಿ ಖಾಸಗಿ ಬಡಾವಣೆ ನಿರ್ಮಿಸಿದ್ದರ ಹಿನ್ನೆಲೆಯಲ್ಲಿ ನಗರದಲ್ಲಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ನೇತೃತ್ವದಲ್ಲಿ ಆ ಬಡಾವಣೆಯನ್ನು ಇಂದು ತೆರವು ಗೊಳಿಸುವ ಕಾರ್ಯಾಚರಣೆ ಗಿಳಿಯಲಾಯಿತು.

ಈ ವೇಳೆ ಸ್ಥಳೀಯ ನಿವೇಶನದಾರರು ವಿರೋಧ ವ್ಯಕ್ತಪಡಿಸಿ ಸಮಯಾವಕಾಶ ನೀಡುವಂತೆ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅವರಲ್ಲಿ ಮನವಿ ಮಾಡಿದರು. ಇವರೊಂದಿಗೆ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯರಾದ ಚಮನ್‌ಸಾಬ್, ಕಬೀರ್, ಜೆಡಿಎಸ್ ಮುಖಂಡ ಜೆ.ಅಮಾನುಲ್ಲಾ ಖಾನ್ ಮನವಿ ಮಾಡಿದರು. ಮನವಿ ಮೇರೆಗೆ ಅನಧಿಕೃತ ಬಡಾವಣೆಯನ್ನು ಸಕ್ರಮಗೊಳಿಸಲು ಸೋಮವಾರದವರೆಗೆ ಗಡುವು ನೀಡಿ, ತೆರವು ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಯಿತು.

ಬೂದಾಳು ರಸ್ತೆಯ ಕೃಷಿ ಜಮೀನನ್ನು ಯಾವುದೇ ರೀತಿಯಲ್ಲಿ ಭೂ ಪರಿವರ್ತನೆ ಮಾಡದೆ, ದೂಡಾಕ್ಕೆ ಶುಲ್ಕ ಪಾವತಿಸದೆ, ನಿಯಮಾನುಸಾರವಾಗಿ ರಸ್ತೆ, ಪಾರ್ಕ್ ಮತ್ತು ಚರಂಡಿಗೆ ಜಾಗ ಬಿಡದೆ ಅಂದಾಜು 150 ಎಕರೆಯಲ್ಲಿ ಅನಧಿಕೃತ ಬಡಾವಣೆ ನಿರ್ಮಿಸಿದ್ದಾರೆ. ಈ ಬಡಾವಣೆಗಳ ಮಾಲೀಕರಿಗೆ ಕಳೆದ 6 ತಿಂಗಳಿನಿಂದ ನೋಟಿಸ್ ನೀಡಿ, ಅನಧಿಕೃತ ಬಡಾವಣೆಯನ್ನು ಸಕ್ರಮ ಗೊಳಿಸಿಕೊಳ್ಳುವಂತೆ ಸೂಚಿಸಿದ್ದರೂ ಸಹ ಯಾರೂ ಸಕ್ರಮ ಮಾಡಿಕೊಳ್ಳಲು ಮುಂದಾಗಿರಲಿಲ್ಲ. ಅನಧಿಕೃತ ಬಡಾವಣೆ ತೆರವು ಕಾರ್ಯಾಚರಣೆ ನಡೆಸಲು ಮುಂದಾಗಿದ್ದೆವು. ಆದರೆ, ಇಲ್ಲಿನ ನಿವೇಶನ ದಾರರು, ಪಾಲಿಕೆ ಸದಸ್ಯರು ಮತ್ತು ಸ್ಥಳೀಯ ಮುಖಂಡರ ಮನವಿಯ ಮೇರೆಗೆ ಸಕ್ರಮಗೊಳಿಸಿ ಕೊಳ್ಳಲು ಸೋಮವಾರದವರೆಗೆ (5ನೇ ಪುಟಕ್ಕೆ)

## ಶಾಲೆಗಳಲ್ಲಿ ತಾಂತ್ರಿಕ ಶಿಕ್ಷಣಕ್ಕೆ ತೀರ್ಮಾನ

### 8ನೇ ತರಗತಿಯಿಂದಲೇ ಐಟಿಐ, ಡಿಪ್ಲೋಮಾ ಕಲಿಕೆ

ಬೆಂಗಳೂರು, ಆ. 17 - ಮುಂಬರುವ ಶೈಕ್ಷಣಿಕ ವರ್ಷದಿಂದಲೇ ತಾಂತ್ರಿಕ ಶಿಕ್ಷಣ ಶಾಲೆಗಳನ್ನು ರಾಜ್ಯಾದ್ಯಂತ ಪ್ರಾರಂಭಿಸಲು ರಾಜ್ಯ ಸರ್ಕಾರ ಇಂದಿಲ್ಲಿ ಮಹತ್ವದ ತೀರ್ಮಾನ ಕೈಗೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ಉನ್ನತ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣ ಶಾಲೆಗಳನ್ನು ಅರಂಭಿಸಲು ಸಿದ್ದತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇಂತಹ ಶಾಲೆಗಳನ್ನು ನಡೆಸುತ್ತಿದ್ದು, ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಶಾಲೆಗಳನ್ನು ತೆರೆಯಬೇಕು. ಗ್ರಾಮೀಣ ಮಕ್ಕಳಿಗೆ ಪ್ರೌಢ ಶಿಕ್ಷಣದಲ್ಲೇ ತಂತ್ರ ಜ್ಞಾನ ಅಧ್ಯಯನ ಶಿಕ್ಷಣ ನೀಡುವಂತಾಗಬೇಕು. ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಲಾ ಒಂದು ಸರ್ಕಾರಿ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳಲೇಬೇಕು.

ಜಿಲ್ಲೆಯ ಯಾವ ಸರ್ಕಾರಿ ಶಾಲೆ ಅತ್ಯುತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತದೆಯೋ ಅಂತಹ ಶಾಲೆಯನ್ನು ಆಯ್ಕೆ ಮಾಡಿ, ಈ ಶಿಕ್ಷಣವನ್ನು ಪ್ರಾರಂಭಿಸಿ. ಡಿಪ್ಲೋಮಾ ಮತ್ತು ಐಟಿಐನಲ್ಲಿ ನೀಡಲಾಗುತ್ತಿರುವ ಶಿಕ್ಷಣವನ್ನು 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ನೀಡುವಂತಾಗಬೇಕು. ಇದರಿಂದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣವನ್ನರಿತು, ಮುಂದಿನ ದಿನಗಳಲ್ಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಯಥಾವತ್ತಾಗಿ ರಾಜ್ಯದಲ್ಲಿ ಅನುಷ್ಠಾನಗೊಳ್ಳಬೇಕು. ಇದಕ್ಕೆ ಆದ್ಯತೆ ನೀಡುವಂತೆ ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್‌ನಾರಾಯಣ್ ಅವರ ಕೆಲವು ಸಲಹೆಗಳಿಗೆ ಸಭೆಯಲ್ಲೇ ಮನ್ನಣೆ ನೀಡಿದ ಮುಖ್ಯಮಂತ್ರಿಯವರು ಅಧ್ಯಾಪಕರ ಖಜಾನೆ ಆರಂಭಿಸುವ ತೀರ್ಮಾನ ಕೈಗೊಳ್ಳಲಾಯಿತು.

**ಸಿಇಟಿ ಮಾದರಿಯಲ್ಲೇ ಪ್ರತ್ಯೇಕ ಕೇಂದ್ರವನ್ನು ಸ್ಥಾಪಿಸಲಾಗುವುದು, ಈ ಮೂಲಕ ಅಧ್ಯಾಪಕ ವೃತ್ತಿ ಬಯಸುವವರು ಈ ಕೇಂದ್ರದಲ್ಲಿ ಪರೀಕ್ಷೆ ತೆಗೆದುಕೊಂಡು, ತೇರ್ಗಡೆ ಹೊಂದಿದರೆ ಅಂತಹವರಿಗೆ ವಿಶ್ವವಿದ್ಯಾಲಯ, ಸರ್ಕಾರಿ ಮತ್ತು ಅರೆ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಉಪನ್ಯಾಸಕ ರಾಗಿ ಸೇರ್ಪಡೆಗೊಳ್ಳಬಹುದು ಎಂಬ ನಿರ್ಧಾರಕ್ಕೆ ಬರಲಾಗಿದೆ.**

ಖಜಾನೆಯಲ್ಲಿ ತೇರ್ಗಡೆಗೊಂಡವರನ್ನೇ ಮುಂದಿನ ದಿನಗಳಲ್ಲಿ ಯಾವುದೇ ಪರೀಕ್ಷೆ ನಡೆಸದೇ ನೇರವಾಗಿ ಈ ಸಂಸ್ಥೆಗಳು ಆಯ್ಕೆ ಮಾಡಿಕೊಳ್ಳಬಹುದು. ಇದರಿಂದ ಭ್ರಷ್ಟಾಚಾರ ತಪ್ಪುವುದಲ್ಲದೆ, ಅರ್ಹತೆವುಳ್ಳವರಿಗೆ ಅವಕಾಶಗಳು ಲಭ್ಯವಾಗುತ್ತವೆ. ಈ ಖಜಾನೆಯನ್ನು ತಕ್ಷಣವೇ ಪ್ರಾರಂಭಿಸಲು ರೂಪುರೇಷೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಅರೆಕಾಲಿಕ ಉಪನ್ಯಾಸಕರನ್ನು ಇನ್ನು ಮುಂದೆ ಇಂತಹ ಖಜಾನೆ ಮೂಲಕವೇ ಭರಿಸಿಕೊಳ್ಳಬಹುದು. ಇದರಿಂದ ಮಧ್ಯವರ್ತಿಗಳಿಗೆ ನೀಡಲಾಗುತ್ತಿರುವ ಹಣವನ್ನು ತಪ್ಪಿಸಬಹುದಾಗಿದೆ.

ವಿಶ್ವವಿದ್ಯಾಲಯ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಇಲಾಖಾಧಿಕಾರಿಗಳಿಗೆ ಸೂಚಿಸಿದ ಮುಖ್ಯಮಂತ್ರಿಯವರು, ಮುಂದಿನ ಆಯವ್ಯಯದಲ್ಲಿ ಶಿಕ್ಷಣಕ್ಕೆ ಹೆಚ್ಚು ಅನುದಾನ ನೀಡುವುದಾಗಿಯೂ ತಿಳಿಸಿದ್ದಾರೆ.

## ಅಮೆರಿಕದ ಶಸ್ತ್ರಾಸ್ತ್ರ ತಾಲಿಬಾನ್ ವಶಕ್ಕೆ

ವಾಷಿಂಗ್ಟನ್, ಆ. 17 – ಅಮೆರಿಕದ ಕಳೆದ ಎರಡು ದಶಕಗಳಲ್ಲಿ ಭದ್ರತಾ ಪಡೆಗಳ ತರಬೇತಿ ಹಾಗೂ ಸೌಲಭ್ಯಗಳ ನಿರ್ಮಾಣಕ್ಕಾಗಿ 83 ಶತಕೋಟಿ ಡಾಲರ್ ವೆಚ್ಚ ಮಾಡಿದೆ. ವಿಪರ್ಯಾಸ ಎಂದರೆ, ಇದರ ದೊಡ್ಡ ಭಾಗ ಈಗ ತಾಲಿಬಾನ್‌ಗೆ ನೆರವಾಗಲಿದೆ!



ಆಫ್ಘಾನಿಸ್ತಾನದಲ್ಲಿ ರಾಜಕೀಯ ಅಧಿಕಾರವನ್ನಷ್ಟೇ ಅಲ್ಲದೇ, ಅಮೆರಿಕ ಪೂರೈಸಿದ್ದ ಬಂದೂಕು, ಶಸ್ತ್ರಾಸ್ತ್ರ, ಹೆಲಿಕಾಪ್ಟರ್ ಇತ್ಯಾದಿಗಳನ್ನು ತಾಲಿಬಾನ್ ತನ್ನ ವಶ ಮಾಡಿಕೊಂಡಿದೆ.

ಜಿಲ್ಲಾ ಕೇಂದ್ರಗಳನ್ನು ರಕ್ಷಿಸಿಕೊಳ್ಳಲು ಆಫ್ಘಾನ್ ಪಡೆಗಳು ವಿಫಲವಾದ ನಂತರ ತಾಲಿಬಾನ್ ಆಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದೆ. ಸಮರ ವಿಮಾನಗಳು ತಾಲಿಬಾನ್ ಪಾಲಾಗಿರುವುದು ದೊಡ್ಡ ಬೆಳವಣಿಗೆಯಾಗಿದೆ. ಆಫ್ಘಾನ್ ಸರ್ಕಾರಿ ಪಡೆಗಳು ಹಾಗೂ ಅಮೆರಿಕದ ಸೈನ್ಯದ ಗುಪ್ತಚರ ವಿಭಾಗದ ದೊಡ್ಡ ಹಿನ್ನಡೆಯಿಂದ ಈ ಮುಜುಗರ ತರುವ ಬೆಳವಣಿಗೆಯಾಗಿದೆ. ಆಫ್ಘಾನ್ ಸೈನ್ಯದ ಕೆಲವರು ಹೋರಾಟ ಮಾಡುವ ಬದಲು ತಮ್ಮ ವಾಹನಗಳು ಹಾಗೂ ಶಸ್ತ್ರಗಳನ್ನು ತಾಲಿಬಾನ್‌ಗೆ ಒಪ್ಪಿಸಿದ್ದಾರೆ ಎಂದು ಅಮೆರಿಕ ಸೈನ್ಯದ ಹೆಸರು ಬಹಿರಂಗ ಪಡಿಸಲು ಬಯಸದ ಮೂಲಗಳು ತಿಳಿಸಿವೆ.


ಆಫ್ಘಾನ್ ಸೈನ್ಯ ಹಾಗೂ ಪೊಲೀಸ್ ಪಡೆಗಳು ಸುಸ್ಥಿರಗೊಳ್ಳಬಹುದಾದ ವ್ಯವಸ್ಥೆ ಕಲ್ಪಿಸಲು ಅಮೆರಿಕ ವಿಫಲವಾಗಿರುವುದೇ ಈ ಕುಸಿತಕ್ಕೆ ಕಾರಣವಾಗಿದೆ ಎಂದು ಸೈನ್ಯದ ವಿಶ್ಲೇಷಕರು ಹೇಳಿದ್ದಾರೆ.

ಆಫ್ಘಾನ್ ಸೈನ್ಯಕ್ಕೆ ಅಮೆರಿಕ ಉನ್ನತ ಶಸ್ತ್ರಗಳನ್ನು ಒದಗಿಸಿತ್ತು. ಆದರೆ, ಹೋರಾಟಕ್ಕೆ ಉತ್ತೇಜನ ಅವರಲ್ಲಿ ಇರಲಿಲ್ಲ ಎಂದು ವಿಶ್ಲೇಷಕರು ಹೇಳಿದ್ದಾರೆ.

ಹಣದಿಂದ ಇಚ್ಛಾಶಕ್ತಿಯನ್ನು ಖರೀದಿಸಲು ಸಾಧ್ಯವಾಗದು. ನಾಯಕತ್ವವನ್ನು ಹಣದಿಂದ ಪಡೆಯಲಾಗದು ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರ ವಕ್ತಾರ ಜಾನ್ ಕಿರ್ಬಿ ಹೇಳಿದ್ದಾರೆ.

ತ್ವರಿತವಾಗಿ ಅಮೆರಿಕದ ಪಡೆಗಳನ್ನು ವಾಪಸ್ ಪಡೆಯಲು ಮುಂದಾಗಿದ್ದು, ಆಫ್ಘಾನ್ ಪಡೆಗಳನ್ನು ನಾವು ಕೈ ಬಿಟ್ಟಿದ್ದೇವೆ ಎಂಬ ಸಂಕೇತ ರವಾನಿಸಿತು ಎಂದು (5ನೇ ಪುಟಕ್ಕೆ)

## ಪಾಕ್ : ಮಹಾರಾಜ ರಣಜೀತ್ ಸಿಂಗ್ ಪ್ರತಿಮೆ ಧ್ವಂಸ



ಲಾಹೋರ್, ಆ. 17 – ಪಾಕಿಸ್ತಾನದ ಲಾಹೋರ್ ಫೋರ್ಟ್‌ನಲ್ಲಿರುವ ದೇಶದ ಪ್ರಥಮ ಸಿಖ್ ಆಡಳಿತಗಾರ ಮಹಾರಾಜ ರಣಜೀತ್ ಸಿಂಗ್ ಅವರ 9 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದೆ.

ತೆಹರೀಕ್ ಎ ಲಬ್ಬೈಕ್ ಪಾಕಿಸ್ತಾನ್ ಸಂಘಟನೆಗೆ ಸೇರಿದ ಕೆಲವರು ಪ್ರತಿಮೆ ಧ್ವಂಸಗೊಳಿಸಿದ ದೃಶ್ಯ ವೈರಲ್ ಆಗಿದೆ. ಪಂಜಾಬ್ ಪೊಲೀಸರು ಈ ಕೃತ್ಯ ಎಸಗಿದವರನ್ನು ಬಂಧಿಸಿದ್ದಾರೆ.

ಸಿಖ್ ಸಾಮ್ರಾಜ್ಯದ ಸ್ಥಾಪಕರಾಗಿದ್ದ ಮಹಾರಾಜ ರಣಜೀತ್ ಸಿಂಗ್, 19ನೇ ಶತಮಾನದ ಮೊದಲಾರ್ಧದಲ್ಲಿ ಭಾರತೀಯ ಉಪಖಂಡದ ವಾಯುವ್ಯದಲ್ಲಿ ಆಡಳಿತ ನಡೆಸಿದ್ದರು.

## ನಾಡಿನ ಹಿರಿಯ ಸಾಹಿತಿ ಡಾ. ಹೆಚ್. ಗಿರಿಜಮ್ಮ ಇನ್ನಿಲ್ಲ



ದಾವಣಗೆರೆ, ಆ.17- ನಾಡಿನ ಶ್ರೇಷ್ಠ ಸಾಹಿತಿಗಳಲ್ಲೊಬ್ಬರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಮಧ್ಯ ಕರ್ನಾಟಕದ ದಾವಣಗೆರೆಯ ಎಸ್.ಎಸ್.ಬಡಾವಣೆ ವಾಸಿ ಹಿರಿಯ ವೈದ್ಯರೂ, ಸಾಹಿತಿಗಳೂ ಆದ ಡಾ. ಹೆಚ್.ಗಿರಿಜಮ್ಮ ಅವರು ಇಂದು ಬೆಳಿಗ್ಗೆ 10ರ ವೇಳೆಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು ಇಂದು ಸಂಜೆ ಇಲ್ಲಿನ ವೈಕುಂಠ ಧಾಮದಲ್ಲಿ ನೆರವೇರಿತು.

ಸಂಕ್ಷಿಪ್ತ ಪರಿಚಯ : ಗಿರಿಜಮ್ಮ ಅವರು ಮೂಲತಃ ಕೂಡ್ಲಿಗಿ - ಕೊಟ್ಟೂರಿನವರಾಗಿದ್ದು, 3 ಮಾರ್ಚ್ 1951 ರಲ್ಲಿ ಮೂಗಬಸಪ್ಪ - ಚನ್ನಬಸಪ್ಪ ಮಡಲಲ್ಲಿ ಹರಿಹರದಲ್ಲಿ ಜನಿಸಿದರು. ದಾವಣಗೆರೆ, ಮೈಸೂರಲ್ಲಿ ಪಿಯುಸಿ, ವೈದ್ಯಕೀಯ ಶಿಕ್ಷಣ ಮುಗಿಸಿದರು. ಅಲ್ಲಿಂದ ತಮ್ಮ ವಾಸ ಸ್ಥಳವನ್ನು ದಾವಣಗೆರೆಯನ್ನಾಗಿಸಿಕೊಂಡಿದ್ದರು.

ಚಿಕ್ಕವಯಸ್ಸಿನಲ್ಲೇ ವಿದ್ಯಾಭ್ಯಾಸ ದೊಂದಿಗೆ ಸಾಹಿತ್ಯ ಕ್ಷೇತ್ರದಲ್ಲೂ ಆಸಕ್ತಿ ವಹಿಸಿದ್ದ ಗಿರಿಜಮ್ಮ, ಕಾದಂಬರಿಗಾರ್ತಿ ತ್ರಿವೇಣಿ ಬರಹದಿಂದ ಪ್ರೇರಣೆ ಪಡೆದು ಸಾಹಿತ್ಯ ರಚನೆಗೆ ತೊಡಗಿದರು. ಅವರ ಕಥೆ, ಲೇಖನ, ನೀಳ್ಗತೆಗಳು ನಾಡಿನ ಹೆಸರಾಂತ ವಾರಪತ್ರಿಕೆಗಳಲ್ಲಿ ಪ್ರಕಟ ಗೊಂಡಿದ್ದವು. ನಿಮ್ಮ ಮಗು, ಸ್ತ್ರೀ ದೇಹ, ಬಸಿರು, ಬಂಜೆತನ ಮತ್ತು ಪರಿಹಾರೋಪಾಯ ಗಳು, ಮಕ್ಕಳು ಮನಸ್ಸು ಮತ್ತು (5ನೇ ಪುಟಕ್ಕೆ)

## ಸಿಡಿಲಿನ ಎಚ್ಚರಿಕೆ ಗಂಟೆ ತಂತ್ರಜ್ಞಾನ ಅಳವಡಿಕೆ

ಬೆಂಗಳೂರು, ಆ. 17 - ಗುಡುಗು, ಸಿಡಿಲಿನಿಂದ ಜನ ಸಾಯುವುದನ್ನು ತಪ್ಪಿಸಲು ಮುಂಜಾಗ್ರತೆಯಾಗಿ ಎಚ್ಚರಿಕೆ ಗಂಟೆ ನೀಡುವ ತಂತ್ರಜ್ಞಾನವನ್ನು ಅಳವಡಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನೆರವಿನಿಂದ ಪ್ರತಿ ಪಂಚಾಯಿತಿಯಲ್ಲೂ ಎಚ್ಚರಿಕೆ ಘಂಟೆ ಅಳವಡಿಸಿ ಗುಡುಗು, ಸಿಡಿಲಿಗೂ ಮುನ್ನ ಅಂದರೆ 30 ನಿಮಿಷಗಳ ಮುಂಚೆ ಸಾರ್ವಜನಿಕರಿಗೆ ಘಂಟೆ ಮೂಲಕ ಸಂದೇಶ ರವಾನಿಸಲಾಗುವುದು ಎಂದವರು ಹೇಳಿದ್ದಾರೆ. ಗಂಟೆಯ ಸಂದೇಶ ಒಂದೂವರೆ ಕಿಲೋ ಮೀಟರ್ ವ್ಯಾಪ್ತಿಗೆ ತಲುಪುತ್ತಿದ್ದು, ಈ ಶಬ್ಧ ಬರುತ್ತಿದ್ದಂತೆ ಜನತೆ ಎಚ್ಚೆತ್ತುಕೊಂಡು ಸುರಕ್ಷತಾ ಸ್ಥಳಗಳಿಗೆ ಸೇರಿಕೊಂಡರೆ ಸಾವು-ನೋವು ತಪ್ಪಿಸಬಹುದಾಗಿದೆ.

ಪ್ರತಿ ಪಂಚಾಯಿತಿಗೂ ಇಂತಹ ಘಂಟೆಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಇದೇ ಮಾದರಿಯಲ್ಲಿ ಕರಾವಳಿ ತೀರದಲ್ಲಿ ಚಂಡ ಮಾರುತ ಬರುವ ಮುನ್ಸೂಚನೆ ನೀಡುವ ಕೇಂದ್ರಗಳನ್ನು ಸ್ಥಾಪಿಸ ಲಾಗುವುದು ಎಂದವರು ಹೇಳಿದ್ದಾರೆ. (5ನೇ ಪುಟಕ್ಕೆ)

## ಕೊರೊನಾ ಗುಣವಾದವರು ಕ್ಷಯ ಪರೀಕ್ಷೆ ಮಾಡಿಸಿಕೊಳ್ಳಿ

ಬೆಂಗಳೂರು, ಆ. 17 - ಕೋವಿಡ್ ಸೋಂಕಿನಿಂದ ಗುಣಮುಖರಾದವರು ತಕ್ಷಣವೇ ಕ್ಷಯರೋಗ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಆರೋಗ್ಯ ಸಚಿವ ಡಾ. ಸುಧಾಕರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಶ್ವಾಸಕೋಶಕ್ಕೆ ಹೆಚ್ಚು ಹಾನಿ ಉಂಟು ಮಾಡುತ್ತದೆ. ಕ್ಷಯರೋಗವು ಇದಕ್ಕೆ ಸಂಬಂಧ ಪಟ್ಟಿದ್ದೇ ಆಗಿರುವುದರಿಂದ ಸೋಂಕಿಗೆ ಒಳಗಾದ ವರು ಮುನ್ನೆಚ್ಚರಿಕೆಯಾಗಿ ಪರೀಕ್ಷೆಗೆ ಒಳಪಡಿಸಿಕೊಂಡು ಮುಂದಾ ಗುವ ಅನಾಹುತ ತಪ್ಪಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

**ರಾಜ್ಯದಲ್ಲಿ ಇದುವರೆಗೂ 28 ಲಕ್ಷ ಮಂದಿ ಸೋಂಕಿನಿಂದ ಗುಣಮುಖರಾಗಿದ್ದಾರೆ. ಇದರಲ್ಲಿ ಕೆಲವರಿಗೆ ಪರೀಕ್ಷೆ ಮಾಡಿದಾಗ ಶೇಕಡ 3.9 ರಷ್ಟು ಮಂದಿಗೆ ಕ್ಷಯರೋಗ ಪತ್ತೆಯಾಗಿದೆ.**
**- ಡಾ. ಸುಧಾಕರ್, ಸಚಿವ**

ಪ್ರಾಥಮಿಕ ಹಂತದಲ್ಲೇ ರೋಗಕ್ಕೆ ಚಿಕಿತ್ಸೆ ಪಡೆದುಕೊಂಡರೆ ದೊಡ್ಡ ಅನಾಹುತವನ್ನು ತಪ್ಪಿಸಬಹುದು. ಮುಂಜಾಗ್ರತೆಯಾಗಿ ಸಮೀಪದ ಸರ್ಕಾರಿ ಇಲ್ಲವೇ ಖಾಸಗಿ ಆಸ್ಪತ್ರೆಗಳಲ್ಲಿ ಪರೀಕ್ಷೆಗೆ ಒಳಪಡಿಸಿಕೊಳ್ಳುವುದು ಒಳ್ಳೆಯದು. ಇದಕ್ಕಾಗಿ ರಾಜ್ಯ ಸರ್ಕಾರ ಆಗಸ್ಟ್ 31 ರವರೆಗೆ ನಡೆಯಲಿರುವ ಕ್ಷಯರೋಗ ಪತ್ತೆ (5ನೇ ಪುಟಕ್ಕೆ)

## ಸುಡೊಕು ಜನಕ ಮಕಿ ಕಾಜಿ ಇನ್ನಿಲ್ಲ

ಟೋಕಿಯೋ, ಆ. 17 – ವಿಶ್ವದಾದ್ಯಂತ ಜನಪ್ರಿಯ ರಾಗಿರುವ ಸುಡೊಕು ಸಂಖ್ಯಾ ಒಗಟು ರೂಪಿಸಿದ್ದ ಮಕಿ ಕಾಜಿ ನಿಧನರಾಗಿದ್ದಾರೆ. ಅವರಿಗೆ 69 ವರ್ಷ ವಯಸ್ಸಾಗಿತ್ತು.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕಾಜಿ ನಿಧನರಾಗಿರುವುದನ್ನು ಅವರ ಕಂಪನಿಯಾದ ನಿಕೊಲಿ ತಿಳಿಸಿದೆ. ಸುಡೊಕು ಪಿತಾಮಹ ಎಂದೇ ಹೆಸರಾಗಿದ್ದ ಅವರು, ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರೂ ಬಿಡಿಸಬಹುದಾದ ಸುಡೊಕು ಒಗಟುಗಳನ್ನು ರೂಪಿಸಿದ್ದರು.

ಕಾಜಿ ಜಪಾನ್‌ನವರೇ ಆಗಿದ್ದರೂ ಸಹ, ಆರಂಭದಲ್ಲಿ ಸುಡೊಕು ಅಲ್ಲಿ ಜನಪ್ರಿಯವಾಗಿರಲಿಲ್ಲ. ನ್ಯೂಜಿ ಲ್ಯಾಂಡ್‌ನ ಸುಡೊಕು ಅಭಿಮಾನಿ ಯೊಬ್ಬರು ಬ್ರಿಟಿಷ್ ಪತ್ರಿಕೆಯಾದ ದಿ ಟೈಮ್ಸ್‌ನಲ್ಲಿ 2004ರಲ್ಲಿ ಸುಡೊಕು ಪ್ರಕಟಿಸಿದ ನಂತರ ಅದು ಹೆಸರು ಗಳಿಸಿತ್ತು. ಎರಡು ವರ್ಷಗಳ ನಂತರ ಜಪಾನ್ ತನ್ನದೇ ಆದ ಸುಡೊಕು ಅನ್ನು ಮರು ಆಮದು (5ನೇ ಪುಟಕ್ಕೆ)

## ಪೆಟ್ರೋಲ್ - ಡೀಸೆಲ್ ಸೆಸ್ ಕಡಿತವಿಲ್ಲ : ಸಿಎಂ

ಬೆಂಗಳೂರು, ಆ. 17 - ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ಕಡಿಮೆ ಮಾಡುವ ಪ್ರಸ್ತಾವನೆ ರಾಜ್ಯ ಸರ್ಕಾರದ ಮುಂದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡು ಸರ್ಕಾರ ಪ್ರತಿ ಲೀಟರ್‌ಗೆ 3 ರೂ. ಸೆಸ್ ಕಡಿಮೆ ಮಾಡಿರಬಹುದು. ಆದರೆ ನಮ್ಮಲ್ಲಿನ ಆರ್ಥಿಕ ಪರಿಸ್ಥಿತಿ ಮತ್ತು ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಸೆಸ್ ಕಡಿಮೆ ಮಾಡುವುದಿಲ್ಲ ಎಂದಿದ್ದಾರೆ.

## ಗಣೇಶ-ಮೊಹರಂ ಹಬ್ಬ ಸಾರ್ವಜನಿಕ ಆಚರಣೆ ಇಲ್ಲ

### ಕೋವಿಡ್ ನಿಯಮಾವಳಿಗಳನ್ವಯ ಸರಳವಾಗಿ ಆಚರಿಸಬೇಕು: ಜಿಲ್ಲಾಧಿಕಾರಿ ಸೂಚನೆ

ದಾವಣಗೆರೆ, ಆ.17 - ಇಲ್ಲಿಯವರೆಗೂ ಬಂದ ಎಲ್ಲಾ ಹಬ್ಬ-ಮಹೋತ್ಸವಗಳನ್ನು ಕೋವಿಡ್ ಮಾರ್ಗಸೂಚಿಯನ್ವಯ ಆಚರಿಸಿದ್ದು, ಮುಂಬರುವ ಗಣೇಶ ಹಾಗೂ ಮೊಹರಂ ಹಬ್ಬಗಳನ್ನು ಕೂಡ ಸಾರ್ವಜನಿಕವಾಗಿ ಆಚರಿಸದೆ ಕೋವಿಡ್ ನಿಯಮಾವಳಿಗಳನ್ವಯ ಸರಳವಾಗಿ ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.



**ಬೀಜದೊಳಗೆ ಎಣ್ಣೆ, ಹಾಲಿನೊಳಗೆ ಬೆಣ್ಣೆ ಇರುವಂತೆ, ನಮ್ಮೊಳಗಿರುವ ದೇವರನ್ನು ನಾವೇ ಹುಡುಕಬೇಕು ಎಂಬ ಸಂತ ಕಬೀರ್ ಅವರ ಸಾಲುಗಳಂತೆ, ಪ್ರಸ್ತುತ ಸ್ಥಿತಿಗತಿಯನ್ನು ಮನಗಂಡು ಸಾರ್ವಜನಿಕ ಹಬ್ಬದ ಆಚರಣೆಗಿಂತ ನಮ್ಮೊಳಗಿನ ಅರಿವಿನ ದೇವರನ್ನು ಮನಗಾಣಬೇಕು.**
**- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ**

ನಗರದ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಗಣೇಶ ಚತುರ್ಥಿ ಹಾಗೂ ಮೊಹರಂ ಹಬ್ಬದ ಪ್ರಯುಕ್ತ ಮಂಗಳವಾರ ಏರ್ಪಡಿಸಿದ್ದ ನಾಗರಿಕ ಸೌಹಾರ್ದ ಸಮನ್ವಯ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಕೋವಿಡ್-19 ಮಾರ್ಗಸೂಚಿಯನ್ವಯ ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ದೇವರ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಯಾವುದೇ ಜಾತ್ರೆ, ವಿಶೇಷ ಪೂಜೆ, ಸಭೆ, ಸಮಾರಂಭ, ಮೆರವಣಿಗೆಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಮಾತನಾಡಿ, ಗಡಿ ಜಿಲ್ಲೆಗಳಿಗೆ ಹೋಲಿಸಿದರೆ ನಮ್ಮ ಜಿಲ್ಲೆಗೆ ಕೋವಿಡ್ ಸೋಂಕು ಒಂದೆರಡು ತಿಂಗಳು ತಡವಾಗಿ ಬರುತ್ತದೆ. ಇದರಿಂದ ಕೋವಿಡ್ ವಿರುದ್ಧ ಹೋರಾಡಲು ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಳ್ಳಲು ಹೆಚ್ಚಿನ ಸಮಯ ದೊರಕುತ್ತದೆ. ಜನರು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿದರೆ ಕೊರೊನಾ ಸೋಂಕಿನಿಂದ ಆಗುವ ಸಾವು-ನೋವು ತಡೆಗಟ್ಟಬಹುದು ಎಂದರು.

ಪಾಲಿಕೆ ಮೇಯರ್ ಎಸ್.ಟಿ.ವೀರೇಶ್ ಮಾತನಾಡಿ, ಕೋವಿಡ್ ಸೋಂಕನ್ನು ಸಮರ್ಥವಾಗಿ ಎದುರಿಸಬೇಕಾದರೆ ಹಬ್ಬ-ಹರಿದಿನಗಳನ್ನು ಸಾಮಾಜಿಕವಾಗಿ ಆಚರಿಸದಂತೆ ಸ್ವಯಂ ಕಡಿವಾಣ ಹಾಕಿಕೊಳ್ಳಬೇಕು. ಯಾವುದೇ ದೇವರು, ಭಕ್ತಿ ಮತ್ತು ಸೇವೆಯನ್ನು ಆಪೇಕ್ಷಿಸುತ್ತಾರೆಯೇ ಹೊರತು ಆಡಂಬರವನ್ನಲ್ಲ ಎಂದರು.

ಆಯುಕ್ತ ವಿಶ್ವನಾಥ ಮುದಜ್ಜಿ ಮಾತನಾಡಿ, ಧಾರ್ಮಿಕ ಮುಖಂಡರು ತಮ್ಮ ಸಮುದಾಯದ ಜನರಿಗೆ ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಲು ತಿಳುವಳಿಕೆ ನೀಡಬೇಕು. ಮೊಹರಂ ಹಬ್ಬದ ಪ್ರಯುಕ್ತ ಸ್ವಚ್ಛತೆ ಕುರಿತು ಹೆಚ್ಚಿನ ಗಮನ ಹರಿಸಲಾಗುವುದು. ನಗರದಲ್ಲಿ ಗಣೇಶ ಮೂರ್ತಿ ವಿಸರ್ಜನೆಗೆ ಈಗಾಗಲೇ 30 ಕಡೆ ಸ್ಥಳ ನಿಗದಿಪಡಿಸಲಾಗಿದೆ. ಹೊರವಲಯದಲ್ಲಿ ಬಾತಿ ಕೆರೆ ಹಾಗೂ ಶಿರಮಗೊಂಡನಹಳ್ಳಿ ಬಳಿ ಅವಕಾಶ ಕಲ್ಪಿಸಲಾಗಿದ್ದು, ಅಲ್ಲಿಯೇ ವಿಸರ್ಜನೆ ಮಾಡಬೇಕು ಎಂದರು.

ಡಿಹೆಚ್ಓ ಡಾ.ನಾಗರಾಜ್ ಮಾತನಾಡಿ, ನಗರದ ಹಳೆ ಭಾಗದಿಂದ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಲು ಯಾರೂ ಮುಂದೆ ಬರುತ್ತಿಲ್ಲ. ಎರಡು ಡೋಸ್ ವ್ಯಾಕ್ಸಿನೇಷನ್ ಮಾಡಿಸಿಕೊಂಡವರಿಗೆ ಕೋವಿಡ್ ಸೋಂಕು ಬರುವ ಸಾಧ್ಯತೆ ಕಡಿಮೆ ಇರುವುದರಿಂದ ಕಡ್ಡಾಯವಾಗಿ ವ್ಯಾಕ್ಸಿನೇಷನ್ ಮಾಡಿಸಿಕೊಳ್ಳಬೇಕು ಎಂದರು. ಪರಿಸರ ಇಲಾಖೆ ಅಧಿಕಾರಿ ಸಂತೋಷ್ ಮಾತನಾಡಿ, ಸಾರ್ವಜನಿಕರು ಒಂದು ಅಡಿಗಿಂತ ಎತ್ತರದ ಗಣಪತಿ ಮೂರ್ತಿಗಳನ್ನು ಕೂರಿಸಬಾರದು. ಪಿಒಪಿ, ಪ್ಲಾಸ್ಟಿಕ್ ಗಣಪತಿ (5ನೇ ಪುಟಕ್ಕೆ)

## ಸೆ.1ರಿಂದ ಆಟೋಗಳಿಗೆ ಮೀಟರ್

### ಮೊದಲ 2 ಕಿ.ಮೀಗೆ ಕನಿಷ್ಠ ದರ 30 ರೂ. ನಿಗದಿ

ದಾವಣಗೆರೆ, ಆ.17- ನಗರದಲ್ಲಿ ಆಟೋ ಪ್ರಯಾಣ ದರ ಮೊದಲ 2 ಕಿ.ಮೀಗೆ ಕನಿಷ್ಠ ದರ 30 ರೂ. (ಮೂವರು ಪ್ರಯಾಣಿಕರಿಗೆ) ನಂತರ ಪ್ರತಿ 1 ಕಿ.ಮೀಗೆ 15 ರೂ.ಗಳಿಗೆ ನಿಗದಿಪಡಿಸಲಾಗಿದ್ದು, ಸೆ.1ರಿಂದಲೇ ಪರಿಷ್ಕೃತ ಪ್ರಯಾಣ ದರ ಜಾರಿಗೆ ಬರಲಿದೆ.

ರಾತ್ರಿ 10ರಿಂದ ಬೆಳಿಗ್ಗೆ 5ಗಂಟೆಯವರೆಗೆ ದರದ ಒಂದೂವರೆ ಪಟ್ಟು ಹಣವನ್ನು ಪ್ರಯಾಣಿಕರು ನೀಡಬೇಕು. ಮೊದಲ 15 ನಿಮಿಷ ಕಾಯುವಿಕೆಗೆ ಯಾವುದೇ ದರ ಇಲ್ಲ. ಆದರೆ ನಂತರದ 15 ನಿಮಿಷಗಳವರೆಗೆ 5 ರೂ. ಹಾಗೂ 20 ಕೆ.ಜಿ. ಲಗೇಜು ಉಚಿತ. ನಂತರದ 20 ಕೆಜಿಗೆ 5 ರೂ. ಗಳನ್ನು ನಿಗದಿಪಡಿಸಲಾಗಿದೆ.

ಬರುವ ಸೆಪ್ಟೆಂಬರ್ 1ರಿಂದ ಕಡ್ಡಾಯವಾಗಿ ಆಟೋಗಳಿಗೆ ಮೀಟರ್ ಅಳವಡಿಸುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶ ಹೊರಡಿಸಿದ್ದಾರೆ.



ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸಿಲಿಂಡರ್, ಗ್ರೀಸ್ ಆಯಿಲ್ ಹಾಗೂ ವಾಹನದ ಬಿಡಿ ಭಾಗಗಳು ಹಾಗೂ ಟೈರ್ ಬೆಲೆ ಹೆಚ್ಚಳವಾಗಿರುವುದರಿಂದ ದರ ಪರಿಷ್ಕರಣೆಗೆ ಆಟೊ ಚಾಲಕರು ಸಲ್ಲಿಸಿದ್ದ ಮನವಿಯ ಮೇರೆಗೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಧರ್ ಕೆ. ಮಲ್ಲಾಡ್ ಹಾಗೂ ತಾಲ್ಲೂಕು ಫೆಡರೇಷನ್ ಆಫ್ ಕರ್ನಾಟಕ ಆಟೋ ಯೂನಿಯನ್ (ಸಿಐಟಿಯು) ಅಧ್ಯಕ್ಷ ಅಣ್ಣಪ್ಪಸ್ವಾಮಿ ಹಾಗೂ ಆಟೋರಿಕ್ಷಾ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಜಿಲ್ಲೆಯ ಎಲ್ಲಾ ಆಟೋ ಚಾಲಕ, ಮಾಲೀಕರು ತಮ್ಮ ಆಟೋಗಳಿಗೆ ಅನುಮತಿ ಇರುವ ಫ್ಲಾಗ್ ಮೀಟರ್‌ಗಳನ್ನು ಅಳವಡಿಸಿಕೊಂಡು ಮೇಲಿನ ದರಕ್ಕೆ ಅನುಗುಣವಾಗಿ ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಆಗಸ್ಟ್ 31ರೊಳಗೆ ರಿಕ್ಯಾಲಿಬರೇಷನ್ ಹಾಗೂ ಸೀಲ್ ಮಾಡಿಸಿಕೊಂಡು ಸೆಪ್ಟೆಂಬರ್‌ಗೆ ಪರಿಷ್ಕರಿಸಿದ ಮೀಟರ್ ದರವನ್ನು ಪ್ರಯಾಣಿಕರಿಂದ ಪಡೆಯಲು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಆಟೋ ಚಾಲಕರು, ಮಾಲೀಕರು ಮತ್ತು ಮಾಲೀಕರು ನಾಗರಿಕರಿಗೆ ಉತ್ತಮ ಸೇವೆ ಒದಗಿಸಬೇಕು ಹಾಗೂ ಪ್ರಯಾಣಿಕರನ್ನು ಗೌರವದಿಂದ ಕಾಣಬೇಕು. ನಿಗದಿತ ದರಕ್ಕಿಂತ ಹೆಚ್ಚಿಗೆ ಪಡೆದವರಿಗೆ, ಅನಧಿಕೃತ ಇಂಧನ (ಗ್ಯಾಸ್, ಸಿಲಿಂಡರ್, ಸೀಮೆಎಣ್ಣೆ) ಬಳಸುವವರಿಗೆ ದಂಡ ವಿಧಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಪೊಲೀಸರಿಗೆ ಎಚ್ಚರಿಕೆ ನೀಡಿದರು.

ಆಟೋರಿಕ್ಷಾ ಮಾಲೀಕರು, ಚಾಲಕರು ಡಿಎಲ್, ವಾಹನದ ನೋಂದಣಿ, ಅರ್ಹತಾ ಪತ್ರ, ವಿಮಾ ಪತ್ರ, ವಾಯುಮಾಲಿನ್ಯ ಪ್ರಮಾಣ ಪತ್ರಗಳನ್ನು ರಿಕ್ಷಾದ ಚಾಲಕರ ಆಸನದ ಹಿಂಭಾಗ ಕಡ್ಡಾಯವಾಗಿ ನಮೂದಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

# ನಗರದ ವಿವಿಧೆಡೆಯಲ್ಲಿ ಸಂಭ್ರಮದ ಸ್ವಾತಂತ್ರ್ಯೋತ್ಸವ

ದಾವಣಗೆರೆ, ಆ. 17- ನಗರ ಹಾಗೂ ನಗರದ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ವಿವಿಧೆಡೆಯಲ್ಲಿ 75ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು.

**ದಾವಣಗೆರೆ ವಿಶ್ವವಿದ್ಯಾನಿಲಯ :** ದಾವಣಗೆರೆ ವಿಶ್ವವಿದ್ಯಾನಿಲಯ ಆವರಣದಲ್ಲಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ, ಪರೀಕ್ಷಾಂಗ ಕುಲಸಚಿವೆ ಪ್ರೊ. ಅನಿತಾ ಎಚ್.ಎಸ್, ಹಣಕಾಸು ಅಧಿಕಾರಿ ಪ್ರಿಯಾಂಕ ಡಿ, ಡೀನ್ ಪ್ರೊ. ಕೆ.ಬಿ.ರಂಗಪ್ಪ, ಪ್ರೊ. ಜೆ.ಕೆ. ರಾಜು, ಪ್ರೊ. ವಿ.ಕುಮಾರ್, ಡಾ. ವೆಂಕಟೇಶ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಗಿರೀಶ್, ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

**ಸಿದ್ಧಗಂಗಾ ಶಾಲೆ :** ನಗರದ ಸಿದ್ಧಗಂಗಾ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ 625ಕ್ಕೆ 625 ಅಂಕ ಪಡೆದ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಬಾಲಕಿಯರಾದ ಅನುಷಾ ಗ್ರೇಸ್, ವಿಜೇತಾ ಮುತ್ತಗಿ ಅವರಿಂದ ಧ್ವಜಾರೋಹಣ ನೆರವೇರಿಸಲಾಯಿತು. ಸಿದ್ಧಗಂಗಾ ಕಾಲೇಜಿನ ಪ್ರಾಂಶುಪಾಲ ನಿರಂಜನ್ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಪ.ಪೂ. ಕಾಲೇಜಿನ ಇತಿಹಾಸ ಉಪನ್ಯಾಸಕ ಶಿವಲಿಂಗಪ್ಪ, ಸಂಸ್ಥೆಯ ನಿರ್ದೇಶಕ ಡಾ. ಜಯಂತ್, ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೋಜ, ಸಂಸ್ಥೆಯ ಅಧ್ಯಕ್ಷ ಪ್ರಶಾಂತ್, ಸದಾಶಿವ ಹೊಳ್ಳ, ತೇಜಸ್ವಿನಿ, ನಿರ್ಮಲ ಗುಬ್ಬಿ, ಸಿಂಚನ, ಕಾವ್ಯ ರುದ್ರಾಕ್ಷಿಬಾಯಿ ಹಾಗೂ ನಾಗರಾಜ್ ಉಪಸ್ಥಿತರಿದ್ದರು.

**ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ :** ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯಸ್ಥರುಗಳಾದ ಎಸ್.ಆರ್. ಶಿರಗಂಬಿ, ಡಾ. ಪಿ.ಎಂ. ಪ್ರೇಮ, ಡಾ. ಜಿ.ಎನ್.ಹೆಚ್. ಕುಮಾರ್, ಪ್ರಸಾದ್ ಬಂಗೇರಾ, ಎ.ಎಸ್. ಕುಸುಮ, ಉಪಸ್ಥಿತರಿದ್ದರು. ಕು. ಜಿ.ಎಂ. ಸಿಂಧು, ಪೂಜಾ ಪಾಟೀಲ್ ಜಿ.ಎಸ್., ಕೆ. ಶಿವರಾಜ್ ಕಾರ್ಯಕ್ರಮ ನಿರ್ವಹಿಸಿದರು.

**ಎವಿಕೆ ಕಾಲೇಜು :** ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಧ್ವಜಾರೋಹಣ ನೆರವೇರಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎ.ಬಿ. ಶಿವನಗೌಡ ಉಪಸ್ಥಿತರಿದ್ದರು. ಎನ್‌ಸಿಸಿ ಅಧಿಕಾರಿಗಳಾದ ಶ್ರೀಮತಿ ರಶ್ಮಿ, ಶ್ರೀಮತಿ ಪ್ರಭಾವತಿ ಎಸ್. ಹೊರಡಿ, ಕ್ರೀಡಾ ವಿಭಾಗದ ಮುಖ್ಯಸ್ಥ ಆರ್. ಚನ್ನಬಸವನಗೌಡ ಕಾರ್ಯಕ್ರಮ ನಿರ್ವಹಿಸಿದರು.

**ಜಿಎಂಐಟಿ :** ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಧ್ವಜಾರೋಹಣ ನೆರವೇರಿಸಿದರು. ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಷ್ಚಂದ್ರ, ಕಾರ್ಯಕ್ರಮದ ಸಂಯೋಜಕ ಹೆಚ್. ಎಸ್. ಓಂಕಾರಪ್ಪ, ದೈಹಿಕ ಶಿಕ್ಷಕ ಜಿ.ಬಿ. ಅಜ್ಜಯ್ಯ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಕೆ.ಎಂ. ಪುಣ್ಯಶ್ರೀ, ಸಂಜನಾ ನಿರೂಪಿಸಿದರು. ಕು. ಶ್ರೀರಕ್ಷಿತಾ ಸ್ವಾಗತಿಸಿದರು. ಗಗನ ವಂದಿಸಿದರು.

**ಇನ್ನರ್‌ವ್ಹೀಲ್ :** ಇನ್ನರ್‌ವ್ಹೀಲ್ ಅಧ್ಯಕ್ಷರಾದ ಶ್ರೀಮತಿ ಗಿರಿಜಾ ಬಿಲ್ಲಳ್ಳಿ, ರೋಟರಿ ಅಧ್ಯಕ್ಷರಾದ ಆಂಜನೇಯ ಮೂರ್ತಿಯವರ ನೇತೃತ್ವದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಇನ್ನರ್‌ವ್ಹೀಲ್ ಕಾರ್ಯದರ್ಶಿ ರತ್ನ ಪಾಟೀಲ್, ರೋಟರಿ ಕಾರ್ಯದರ್ಶಿ ದಯಾನಂದ್ ಹಾಗೂ ಹಿರಿಯ ಇನ್ನರ್‌ವ್ಹೀಲ್ ಸದಸ್ಯರಾದ ನಿರ್ಮಲಾ ಮಹೇಶ್ವರಪ್ಪ, ನಾಗೇಂದ್ರಮ್ಮ ಪರಮೇಶ್ವರಪ್ಪ ಉಪಸ್ಥಿತರಿದ್ದರು.

**ಬಳ್ಳಾರಿ ಸಿದ್ದಮ್ಮ ಪಾರ್ಕ್ :** ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀಮತಿ ಮಂಜುಳಾ ಮಹೇಶ್ ಅವರ ನೇತೃತ್ವದಲ್ಲಿ ಸಿದ್ದಮ್ಮ ಪುತ್ಥಳಿಗೆ ಪುಷ್ಪಾರ್ಚನೆಯೊಂದಿಗೆ ನೆರವೇರಿಸಲಾಯಿತು. ಬಳ್ಳಾರಿ ಸಿದ್ದಮ್ಮನವರ ಮೊಮ್ಮಗ ಚಿಟ್ರಕಿ ಶಿವಕುಮಾರ್ ವಚನ ಗೀತೆ ಹಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಶ್ರೀಮತಿ ಸುಧಾ ಜಯರುದ್ರೇಶ್, ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಪ್ರಮೀಳ ನಲ್ಲೂರು, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಪುಷ್ಪಾ ವಾಲಿ, ಶ್ರೀಮತಿ ಭಾಗ್ಯ ಪಿಸಾಳೆ, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ರೂಪ ಕಾಟ್ವೆ, ಉತ್ತರ ಮಂಡಲದ ಅಧ್ಯಕ್ಷರಾದ ಶ್ರೀಮತಿ ಸರ್ವಮಂಗಳ, ದಕ್ಷಿಣ ಮಂಡಲದ ಅಧ್ಯಕ್ಷ ದೇವೇಂದ್ರಪ್ಪ ಶ್ಯಾಗಲೆ, ಪದಾಧಿಕಾರಿಗಳಾದ ಚಂದ್ರಿಕ, ರೂಪ, ಮಂಜುಳ, ಮಂಗಳ, ಸರಸ್ವತಿ, ಚಲತಾ, ಶ್ವೇತಾ, ಸೌಮ್ಯ, ಕುಮಾರಿ, ಲಕ್ಷ್ಮಿ, ಸರಸ್ವತಿ, ಮಂಜುಳಾ, ಬಿ. ವಿಜಯಲಕ್ಷ್ಮಿ ವೀಣಾ ಮತ್ತಿತರರು ಉಪಸ್ಥಿತರಿದ್ದರು.

**ಚುಟುಕು ಸಾಹಿತ್ಯ ಪರಿಷತ್ :** ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಂಚಾಲಕ ಅಜಯ್ ಭಾರತೀಯ ಧ್ವಜಾರೋಹಣ ನೆರವೇರಿಸಿದರು. ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ರಾಜಶೇಖರ್ ಗುಂಡಗಟ್ಟಿ, ಜಿಲ್ಲಾ ಕಾರ್ಯದರ್ಶಿ ಅಣಬೇರು ತಾರೇಶ್, ಸಂಚಾಲಕ ಬಿ.ಎನ್. ಪಾಟೀಲ್, ಬಿ. ಎಂ.ಜಿ. ವೀರೇಶ್, ಜಿಲ್ಲಾ ಉಪಾಧ್ಯಕ್ಷ ಓಂಕಾರಯ್ಯ ತವನಿಧಿ, ಎಂ. ಬಸವರಾಜು, ಚಿತ್ರ ಕಲಾವಿದರಾದ ಅತೀಕ್, ಚಂದ್ರಶೇಖರ್ ಸಂಗಾ, ಕಾಳಿಂಗರಾವ್ ಉಪಸ್ಥಿತರಿದ್ದರು. ಸುನೀತಾ ಪ್ರಕಾಶ್ ವಂದಿಸಿದರು.

**ಕರ್ನಾಟಕ ಬಂಜಾರ ರಕ್ಷಣಾ ವೇದಿಕೆ :** ಭಗೀರಥ ವೃತ್ತದ ಬಳಿ ಇರುವ ಜಿಲ್ಲಾ ಕಛೇರಿಯ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಗೌರವಾಧ್ಯಕ್ಷ ವೆಂಕಟೇಶ್ ನಾಯ್ಕ, ರಾಜ್ಯ ಅಧ್ಯಕ್ಷ ಕೆ.ಡಿ.



ನಾಯ್ಕ, ರಾಜ್ಯ ಸಂಘಟನಾ ಕಾರ್ಯದರ್ಶಿ ಚಂದ್ರಾನಾಯ್ಕ, ಹಾಲೇಕಲ್ಲು, ರಾಜ್ಯ ಪ್ರಧಾನ ಕಾರ್ಯದರ್ಶಿ ಅರುಣ್ ಎನ್. ರಾಥೋಡ್, ರಾಜ್ಯ ಖಜಾಂಚಿ ಮಂಜಾನಾಯ್ಕ, ರಾಜ್ಯ ಯುವ ಘಟಕದ ಅಧ್ಯಕ್ಷ ಶಿವಣ್ಣ ನಾಯ್ಕ, ದಾವಣಗೆರೆ ಜಿಲ್ಲಾ ಅಧ್ಯಕ್ಷ ಶಂಕರ್ ನಾಯ್ಕ, ಜಿಲ್ಲಾ ಕಾರ್ಯಾಧ್ಯಕ್ಷ ಡಿ. ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ. ಕುಬೇರ ನಾಯ್ಕ, ಜಿಲ್ಲಾ ಉಪಾಧ್ಯಕ್ಷ ಶಿವಣ್ಣ ಸೀತಿಮನಿ, ಜಿಲ್ಲಾ ಸಹ ಕಾರ್ಯದರ್ಶಿ ಚಂದ್ರಶೇಖರ್ ನಾಯ್ಕ, ಶಶಿ ನಾಯ್ಕ ಉಪಸ್ಥಿತರಿದ್ದರು.

**ಮಡಿಕಟ್ಟೆ ಸಮಿತಿ :** ಕಾರ್ಮಿಕ ಮುಖಂಡ ಹೆಚ್.ಜಿ. ಉಮೇಶ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಸ್ಥಳೀಯ ಕಾಂಗ್ರೆಸ್ ಮುಖಂಡ ನಾಗರಾಜ್, ಮಡಿಕಟ್ಟೆಯ ಅಧ್ಯಕ್ಷ ಪಕ್ಕೀರಸ್ವಾಮಿ, ಕಾರ್ಯದರ್ಶಿ ಸಿದ್ದೇಶ್ ರವಿಕುಮಾರ್, ಅಜೇಯ, ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ವರದಿಗಾರರ ಕೂಟ :** ಕೂಟದ ನಿಕಟಪೂರ್ವ ಅಧ್ಯಕ್ಷ ಬಸವರಾಜ್ ದೊಡ್ಮನಿ ಧ್ವಜಾರೋಹಣ ನೆರವೇರಿಸಿದರು. ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಸಂಸ್ಥಾಪಕ ಅಧ್ಯಕ್ಷ ಕೆ. ಏಕಾಂತಪ್ಪ, ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಕಾಡಜ್ಜಿ, ತಾರಾನಾಥ್, ನಂದಕುಮಾರ್, ವರದರಾಜ್, ಕಿರಣ್, ಪುನೀತ್, ವರದರಾಜ್, ಸತೀಶ್, ನೂರ್ ಉಲ್ಲಾ, ವೀರೇಶ್, ನಿಂಗಪ್ಪ, ಮಹಾದೇವ್, ಯೋಗೇಶ್, ಶೀಲವಂತ್, ಭಾಸ್ಕರ್, ಪ್ರಕಾಶ್, ನಿವೃತ್ತ ಮುಖ್ಯಶಿಕ್ಷಕ ಎ.ಕೆ. ರಾಮಪ್ಪ ಉಪಸ್ಥಿತರಿದ್ದರು.

**ಮೆಕ್ಯಾನಿಕ್ ಸಂಘ :** ಪಾಲಿಕೆ ಸದಸ್ಯ ಸೈಯದ್ ಚಾರ್ಲಿ ಧ್ವಜಾರೋಹಣ ನೆರವೇರಿಸಿದರು. ಸಂಘದ ಅಧ್ಯಕ್ಷ ತಿಪ್ಪೇಶ್, ಪದಾಧಿಕಾರಿಗಳಾದ ರಿಯಾಜ್ ಅಹ್ಮದ್, ಫಕೀರಸ್ವಾಮಿ, ಹನುಮಂತಪ್ಪ, ನಾಜೀರ್ ಹುಸೇನ್, ಸೈಯದ್ ಬುರಹಾನ್, ಬಿ.ಆರ್. ಗಿರಿರಾಜು, ಮಹೇಶ್, ದಾದಾಪೀರ್, ಸೈಯದ್ ಸಾಧಿಕ್ ಮತ್ತಿತರರು ಉಪಸ್ಥಿತರಿದ್ದರು.

**ತಾಲ್ಲೂಕು ಫೋಟೋ ಮತ್ತು ವೀಡಿಯೋಗ್ರಾಫರ್ ಸಂಘ, ಜಿಲ್ಲಾ ಅಖಿಲ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘ ಹಾಗೂ ಕನ್ನಡ ಸಮರ ಸೇನೆ :** ಪಿಸಾಳೆ ಕಾಂಪೌಂಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಮಹಾಪೌರ ಬಿ.ಜೆ. ಅಜಯ್‌ಕುಮಾರ್ ಧ್ವಜಾರೋಹಣ ನೆರವೇರಿಸಿದರು. ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ದಾವಣಗೆರೆ ಜಿಲ್ಲಾ ಅಖಿಲ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂ. ಮನು, ಕನ್ನಡ ಸಮರ ಸೇನೆಯ ರಾಜ್ಯ ಮಹಿಳಾ ಅಧ್ಯಕ್ಷರಾದ ದ್ರಾಕ್ಷಾಯಣಮ್ಮ ಮಲ್ಲಿಕಾರ್ಜುನಯ್ಯ, ಕನ್ನಡ ಸಮರ ಸೇನೆಯ ರಾಜ್ಯಾಧ್ಯಕ್ಷ ಕೋಟ್ಯಾಳ ಸಿದ್ದೇಶ್, ಕನಕ ಯುವಸೇನ ಜಿಲ್ಲಾಧ್ಯಕ್ಷ ಎಚ್ ವೈ ಶಶಿಧರ್, ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘದ ಉಪಾಧ್ಯಕ್ಷ ಕಿರಣ್, ಸಂಚಾಲಕ ಮಲ್ಲೇಶ್, ನಿರ್ದೇಶಕರಾದ ಪಂಚಾಕ್ಷರಯ್ಯ, ರಾಮು, ಗಗನ್, ರಾಯ್ಕರ್, ಕನ್ನಡ ಸಮರ ಸೇನೆ, ರಾಜ್ಯ ಖಜಾಂಚಿ ರಾಜೇಶ್ವರಿ ಟಿ.ಎಂ, ಪ್ರಧಾನ ಕಾರ್ಯದರ್ಶಿ ಸಂಗೀತ, ಜಿಲ್ಲಾ ಉಪಾಧ್ಯಕ್ಷ ನಾಗರತ್ನ ಆನಂದ್, ಕರ್ನಾಟಕ ರಕ್ಷಣಾ ಗಜಸೇನೆಯ, ನಿಂಗರಾಜ್, ಮಹಿಳಾ ಅಧ್ಯಕ್ಷ ಶ್ರೀಮತಿ ಗೀತಾ, ಭರತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಸೋಮೇಶ್ವರ ವಿದ್ಯಾಲಯ :** ಬಿಜೆಪಿ ಹಾವೇರಿ ಜಿಲ್ಲಾ ಸಂಘಟನಾ ಉಸ್ತುವಾರಿ ಎಲ್.ಎನ್. ಕಲ್ಲೇಶ್ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್, ಪ್ರಾಂಶುಪಾಲರಾದ ಎನ್. ಪ್ರಭಾವತಿ, ಆಡಳಿತಾಧಿಕಾರಿ ಎಂ.ಆರ್. ಹರೀಶ್ ಬಾಬು, ಮುಖ್ಯೋಪಾಧ್ಯಾಯರಾದ ಗಾಯತ್ರಿ, ಮಾಲಾ ಮತ್ತು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

**ಬೀರೇಶ್ವರ ಜಾಗ ಅಭಿವೃದ್ಧಿ ಟ್ರಸ್ಟ್ :** ಗೌರವ ಕಾರ್ಯದರ್ಶಿ ಜೆ.ಕೆ. ಕೊಟ್ರಬಸಪ್ಪ ಧ್ವಜಾರೋಹಣ ನೆರವೇರಿಸಿದರು. ಮಹಾನಗರ ಪಾಲಿಕೆ ಸದಸ್ಯರಾದ ಸುಧಾ ಇಟ್ಟಿಗುಡಿ ಮಂಜುನಾಥ್, ಜಯಣ್ಣ, ರವಿ ಕನ್ನವರ, ವೆಂಕಟೇಶ್, ಹೆಚ್.ಎನ್. ಪ್ರಕಾಶ್, ಲಿಂಗರಾಜು, ಕವಿರಾಜ, ಲೋಹಿತ್ ಇಟ್ಟಿಗುಡಿ, ಜಿ. ಪರಮೇಶ್, ಆರ್.ಪಿ. ಮೋಹನ್ ಕುಮಾರ್, ಹೆಚ್. ಆರ್. ಪ್ರಭು, ಹೆಚ್.ಆರ್. ನರಸಿಂಹ, ಈಶ್ವರ್ ಪೂಜಾರ್ ಉಪಸ್ಥಿತರಿದ್ದರು.

**ಕರ್ನಾಟಕ ರಕ್ಷಣಾ ವೇದಿಕೆ :** ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಧ್ವಜಾರೋಹಣ ನೆರವೇರಿಸಿದರು. ಜಿಲ್ಲಾ ಗೌರವಾಧ್ಯಕ್ಷ ವಾಸುದೇವ್ ರಾಯ್ಕರ್, ಮಲ್ಲಿಕಾರ್ಜುನ್, ಕೆ.ಜಿ. ಬಸವರಾಜ್, ಎಂ.ಡಿ. ರಫೀಕ್, ರಶೀದ್ ಅಹ್ಮದ್, ಖಾದರ್, ಜಿ.ಎಸ್. ಸಂತೋಷ್, ಸಂಜಯ್, ಶ್ರೀನಿವಾಸ್ ಚಿನ್ನಿಕಟ್ಟೆ, ಸುರೇಶ್, ಶ್ರೀನಿವಾಸ್, ತುಳಸಿರಾಮ್, ಧೀರೇಂದ್ರ, ರಾಕೇಶ್, ನಾಗರಾಜ್, ಚಂದ್ರು, ಕಾಲುಲಾಲ್ ಚೌದ್ರಿ, ನಾಗರಾಜ್, ಮಂಜುನಾಥ್, ರಮೇಶ್, ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಶಾಂತಮ್ಮ, ಮಂಜುಳಮ್ಮ ಮತ್ತಿತರರು ಉಪಸ್ಥಿತರಿದ್ದರು.

**ರಾಘವೇಂದ್ರ ಹೈಟೆಕ್ ಪ.ಪೂ. ಕಾಲೇಜು :** ಸಂಸ್ಥೆಯ ಟ್ರಸ್ಟಿ ಮಂಜುಷಾ ಸೈಮನ್ ಧ್ವಜಾರೋಹಣ ನೆರವೇರಿಸಿದರು. ಕಾಲೇಜಿನ ಪ್ರಾಚಾರ್ಯ ಡಾ. ಅನಿಲ್ ಕುಮಾರ್ ಶ್ಯಾಗಲೆ ಉಪಸ್ಥಿತರಿದ್ದರು.

**ಜೆ.ಕೆ. ಉರ್ದು ಹೈಯರ್ ಪ್ರೈಮರಿ ಸ್ಕೂಲ್ :** ಗುಲ್ಜಾರ್ - ಅದಬ್ ಸಂಸ್ಥೆಯ ಕಾರ್ಯದರ್ಶಿ ಟಿ. ಅತಾವುಲ್ಲಾ ಧ್ವಜಾರೋಹಣ ನೆರವೇರಿಸಿದರು. ಜಂಟಿ ಕಾರ್ಯದರ್ಶಿ ಪತ್ರಕರ್ತ ತಾರಿಕ್ ನಕಾಶ್, ಮುಖ್ಯೋಪಾಧ್ಯಾಯರಾದ ಮಾಸೂಮ್ ಅಲಿ ಮತ್ತಿತರರು ಉಪಸ್ಥಿತರಿದ್ದರು.

**ಕದಂಬ ಉದ್ಯಾನವನ :** ಜಯನಗರ ಸಿ ಬ್ಲಾಕ್‌ನ ನಾಗರಿಕ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಪಿ. ಅಂಜನಪ್ಪ ಧ್ವಜಾರೋಹಣ ನೆರವೇರಿಸಿದರು. ಗೌರವಾಧ್ಯಕ್ಷ ಎ.ವೈ. ಪ್ರಕಾಶ್, ಉಪಾಧ್ಯಕ್ಷ ಹಾಗೂ ನಿವೃತ್ತ ಉಪನ್ಯಾಸಕ ಬಿಕ್ಕೋಜಪ್ಪ, ಅಂಜನಮೂರ್ತಿ, ತಿಪ್ಪೇಸ್ವಾಮಿ, ಪಿ.ಎಸ್. ನಾಗರಾಜ್, ಅನಂತ ಶೆಟ್ರು, ಸುರೇಶ್, ಮೈಲಾರಪ್ಪ, ಶಂಕರಾಚಾರ್ಯ, ಶಿವಮೂರ್ತಿ, ರುದ್ರೇಶ್, ಬೈರೇಶ್, ಸುರೇಶ, ಇಟಗಿ ನಿಂಗಪ್ಪ, ರುದ್ರಪ್ಪ, ಪತ್ರಕರ್ತ ಎಂ.ವೈ. ಸತೀಶ್ ಹಾಗೂ ಕೆ. ಚಂದ್ರಪ್ಪ ಉಪಸ್ಥಿತರಿದ್ದರು.

**ದಾರುಲ್ ಉಲೂಮ್ ರಜಾವುಲ್ ಮುಸ್ತಫಾ ವ ದಾರುಲ್ ಯಾತಾಮಾ ಸಂಸ್ಥೆ :** ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಮೌಲಾನಾ ಮಹ್ಮದ್ ಹನೀಫ್ ರಜಾ ಖಾದ್ರಿ ಧ್ವಜಾರೋಹಣ ನೆರವೇರಿಸಿದರು. ಆಜಾದ್ ನಗರ ಪೊಲೀಸ್ ಠಾಣೆಯ ಮಾಲತೇಶ್, ನಾಗರಾಜ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಖಾದರ್ ಭಾಷಾ, ಸಂಸ್ಥೆಯ ಪ್ರಾಂಶುಪಾಲ ಮೌಲಾನಾ ಮಹ್ಮದ್ ಅಲೆ ರಜಾ ಖಾದ್ರಿ, ಸಹ ಪ್ರಾಂಶುಪಾಲ ಮೌಲಾನಾ ಮಹ್ಮದ್ ಅಲಿ ರಜಾ ಖಾದ್ರಿ, ಶಿಕ್ಷಕರಾದ ಮೌಲಾನಾ ಮುಜಾಹಿದ್ ರಜಾ ಖಾನ್, ಹಾಫೀಜ್ ಸೈಯದ್ ಗೌಸ್, ಹಾಫೀಜ್ ಮಹ್ಮದ್ ಸಾಧಿಕ್, ಹಾಫೀಜ್ ಮಜರ್ ಖಾನ್, ಹಾಫೀಜ್ ಮಹಬೂಬ್ ಭಾಷಾ ಮತ್ತಿತರರು ಉಪಸ್ಥಿತರಿದ್ದರು.

# ರೈತ, ಸೈನಿಕನ ಋಣ ತೀರಿಸಲು ಸಾಧ್ಯವಿಲ್ಲ



## ರಾಣೇಬೆನ್ನೂರಿನಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ

ರಾಣೇಬೆನ್ನೂರು, ಆ.17- ದೇಶಕ್ಕೆ ಅನ್ನ ಕೊಡುವ ರೈತ, ದೇಶ ಕಾಯುವ ಸೈನಿಕ ಇವರುಗಳ ಋಣವನ್ನು ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂತಹ ಮಹಾತ್ಮರನ್ನು ಪೂಜಿಸಿ, ಗೌರವಿಸುವ ಪ್ರವೃತ್ತಿಯನ್ನು ಸರ್ವರೂ ಅಳವಡಿಸಿಕೊಳ್ಳಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಕರೆ ನೀಡಿದರು.

ಭಾರತೀಯ ಭೂ ಸೇನೆಯಲ್ಲಿ 17 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಸ್ವಗ್ರಾಮಕ್ಕೆ ಆಗಮಿಸಿರುವ ಗುತ್ತೆಪ್ಪ ಕರೆತಿಮ್ಮಣ್ಣನವರ ಮತ್ತು ಅಡಿವೆಪ್ಪ ಗಿಂಡಿ ಹಾಗೂ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಗೆ ಹೊಸದಾಗಿ ನೇಮಕವಾಗಿರುವ ಗುತ್ತೆಪ್ಪ ಹುಲ್ಮನಿ ಇವರುಗಳಿಗೆ ಹೊಸ ಚಂದಾಪುರ ಗ್ರಾಮಸ್ಥರು ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳಿಗೆ ದೇಶಾಭಿಮಾನ, ಉತ್ತಮ ಸಂಸ್ಕೃತಿ, ಸಂಸ್ಕಾರ, ಧಾರ್ಮಿಕತೆಯ ಮನೋಭಾವನೆ ಬೆಳೆಸಿದಾಗ ಅಂತಹ ಮಕ್ಕಳು ಸಮಾಜದಲ್ಲಿ ಆದರ್ಶರಾಗಿರಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ದೇಶಕ್ಕಾಗಿ ಹೋರಾಡಿದ ಮಹಾತ್ಮರ, ಶರಣರ, ದಾರ್ಶನಿಕರ ಜೀವನದ ಆದರ್ಶಗಳನ್ನು ಸರ್ವರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಂದಾಗ ನಾವು ಸಮಾಜದಲ್ಲಿ ಉತ್ತಮರಾಗಿರಲು ಸಾಧ್ಯವಾಗುತ್ತದೆ ಎಂದರು.

ಗ್ರಾಮಾಂತರ ವಿಭಾಗದ ಸಿಪಿಐ ಶ್ರೀಶೈಲ ಚೌಗಲಾ ಮಾತನಾಡಿ, ಸಿನಿಮಾದಲ್ಲಿ ಬರುವ ನಾಯಕರು ಹೀರೋಗಳಲ್ಲ. ದೇಶಕ್ಕೆ ಅನ್ನ ಕೊಡುವ ರೈತರು ಮತ್ತು ದೇಶ ಕಾಯುವ ಯೋಧರು ನಿಜವಾದ ಹೀರೋಗಳು. ಅಂತವರ ಭಾವಚಿತ್ರವನ್ನು ಮನೆಗಳಲ್ಲಿ, ಗ್ರಾಮಗಳಲ್ಲಿ ಹಾಕಿ ಪೂಜೆ ಮಾಡಿ ಆಗ ನಿಜಕ್ಕೂ ದೇಶ ಪ್ರೇಮವನ್ನು ಮೆರೆದಂತಾಗುತ್ತದೆ ಎಂದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ ಕಾರ್ಯಕ್ರಮ ಕುರಿತು ಮಾತನಾಡಿದರು. ಗ್ರಾ.ಪಂ. ಅಧ್ಯಕ್ಷೆ ರತ್ನವ್ವ ಬನ್ನಿಮಟ್ಟಿ, ಸದಸ್ಯರುಗಳಾದ ರಾಜಪ್ಪ ಚನ್ನಗೌಡ್ರ, ಮಾಲತೇಶ ನಾಣಾಪುರ, ರೇಣುಕಾ ಮೇವುಂಡಿ, ಗುಡ್ಡಪ್ಪ ಗಂಟಿ, ದೇವರಾಜ ಆನಿಶೆಟ್ರು, ಪುಟ್ಟಪ್ಪ ಗಂಟಿ, ಕವಿತಾ ಹರಿಜನ, ಗ್ರಾಮದ ಮುಖಂಡರಾದ ವಿರುಪಾಕ್ಷಪ್ಪ ಭಂಗಿ, ಪುಲಿಕೇಶಪ್ಪ ಬಣಕಾರ, ಅಡಿವೆಪ್ಪ ಗಿಂಡಿ, ರಾಜಶೇಖರ ಅಂಬಿಗೇರ, ಪುಟ್ಟಪ್ಪ ತಂಗೋಡ, ಸಿದ್ದಪ್ಪ ದುಂಡಿಯವರ, ಸೋಮಪ್ಪ ಗರ್ಭಗುಡಿ, ಸಚಿನ್ ಕುದರಿಹಾಳ, ಬಸವರಾಜ ಹುರಳಿ, ಅವಿನಾಶ ಮಾಳಗಿ, ವೀರಣ್ಣ ಕಂಚಾರಗಟ್ಟಿ, ವೀರಣ್ಣ ಕಂಬಳಿ, ರುದ್ರಪ್ಪ ಹುಲ್ಮನಿ, ವೀರಣ್ಣ ಕಂಬಳಿ, ರವಿ ಜಾಧವ, ಗಂಗಪ್ಪ ಗಂಟಿ ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ಭದ್ರೆಯ ಒಡಲು ಪ್ರತಿವರ್ಷ ಭರ್ತಿಯಾಗಲಿ



## ಶಾಸಕ ರಾಮಪ್ಪ ಆಶಯ

ಬಿ.ಆರ್. ಪ್ರಾಜೆಕ್ಟ್, ಆ.17- ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಮಂಗಳವಾರ ಶಾಸಕ ಎಸ್. ರಾಮಪ್ಪ, ಹರಿಹರ ಕ್ಷೇತ್ರದ ಜನರ ಸಮ್ಮುಖದಲ್ಲಿ ಗಂಗಾ ಪೂಜೆ ನೆರವೇರಿಸಿ, ಬಾಗಿನ ಅರ್ಪಿಸಿದರು.

ನಂತರ ಮಾತನಾಡಿದ ಶಾಸಕರು, ಮಳೆ-ಬೆಳೆ ಸಮೃದ್ಧಿಯಾಗಲಿ. ಭದ್ರೆ ಒಡಲು ಪ್ರತಿ ವರ್ಷ ಭರ್ತಿಯಾಗಲಿ. ರೈತರ ಬದುಕು ಹಸನಾಗಲಿ ಎಂದು ಗಂಗೆಯಲ್ಲಿ ಪ್ರಾರ್ಥಿಸಿದ್ದೇನೆ ಎಂದರು.

ಶಿವಮೊಗ್ಗ, ದಾವಣಗೆರೆ, ಹಾವೇರಿ, ಬಳ್ಳಾರಿ, ಗದಗ ಜಿಲ್ಲೆಗಳಿಗೆ ವರದಾನವಾಗಿರುವ ಭದ್ರಾ ಜಲಾಶಯದಿಂದಲೇ ಅಪ್ಪರ್ ಭದ್ರಾ ಕಾಲುವೆಗೆ ನೀರು ಹರಿಸುವುದರಿಂದ ಬೇಸಿಗೆ ಸಮಯದಲ್ಲಿ ಅಚ್ಚುಕಟ್ಟಿನ ರೈತರಿಗೆ ತೊಂದರೆ ಆಗಲಿದೆ. ತುಂಗಾ ಜಲಾಶಯದಿಂದಲೇ 29 ಟಿಎಂಸಿ ನೀರನ್ನು ಭದ್ರಾ ಜಲಾಶಯಕ್ಕೆ ಲಿಫ್ಟ್ ಮಾಡುವಂತಾಗಬೇಕು. ತುಂಗಾದಿಂದ ನೀರು ಭದ್ರಾಕ್ಕೆ ಹರಿದ ನಂತರ ಅಪ್ಪರ್ ಭದ್ರಾ ಕಾಲುವೆಗೆ ನೀರು ಹರಿಸಬೇಕೆಂದು ಶಾಸಕರು ಸರ್ಕಾರವನ್ನು ಒತ್ತಾಯಿಸಿದರು.

ಮಳೆಗಾಲದಲ್ಲಿ ನಮ್ಮ ಡ್ಯಾಂ ತುಂಬಿದ ನಂತರ ಹೆಚ್ಚುವರಿ ನೀರನ್ನು ಅಪ್ಪರ್ ಭದ್ರಾ ಕಾಲುವೆಗೆ ಹರಿಸಲು ನಮ್ಮ ವಿರೋಧ ಇಲ್ಲ ಎಂದು ಸ್ಪಷ್ಟಪಡಿಸಿದ ರಾಮಪ್ಪ ಅವರು, ಹರಿಹರ ತಾಲ್ಲೂಕಿನಲ್ಲಿ ಹಾಳಾಗಿರುವ ಭದ್ರಾ ಕಾಲುವೆಗಳನ್ನು ದುರಸ್ತಿ ಮಾಡಿಸಲು ಮತ್ತು ದೇವರ ಬೆಳಕೆರೆ ಪಿಕಪ್ ವ್ಯಾಪ್ತಿಯ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳು ತೆಗೆಸಲು ಸರ್ಕಾರ ಕೂಡಲೇ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಹರಿಹರ ನಗರಸಭೆ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ಡಿಸಿಸಿ ಬ್ಯಾಂಕಿನ ಮಾಜಿ ಅಧ್ಯಕ್ಷ ಪಿ.ಎಸ್. ಹನುಮಂತಪ್ಪ, ಜಿಗಳಿ ಆನಂದಪ್ಪ, ಕಾಂಗ್ರೆಸ್ ಮುಖಂಡರಾದ ಕುಂಬಳೂರು ವಿರೂಪಾಕ್ಷಪ್ಪ, ನಂದಿಗಾವಿ ಶ್ರೀನಿವಾಸ್, ಬಿ. ವೀರಯ್ಯ, ದೇವರ ಬೆಳಕೆರೆ ಮಹೇಶ್ವರಪ್ಪ, ಹಳ್ಳಿಹಾಳ್ ವೀರನಗೌಡ, ವಿವೇಕಾನಂದ ಸ್ವಾಮಿ, ಕೆ.ಪಿ. ಗಂಗಾಧರ್, ಕೊಕ್ಕನೂರಿನ ಡಿ. ಸೋಮಶೇಖರ್, ಟಿ. ರಾಮಚಂದ್ರಪ್ಪ, ಕೆ.ಎನ್. ಹಳ್ಳಿಯ ಗುಬ್ಬಿ ರಂಗನಾಥ್, ಭಾನುವಳ್ಳಿಯ ಟಿ. ಪುಟ್ಟಪ್ಪ, ಹೆಚ್.ಎಸ್. ಕರಿಯಪ್ಪ, ಕಡ್ಲೆಗೊಂದಿ ಹನುಮಂತ ರೆಡ್ಡಿ, ಎ. ಆರೀಫ್ ಅಲಿ, ಭೋವಿ ಕುಮಾರ್, ಬೆಳ್ಳೂಡಿಯ ನರೇಂದ್ರ, ಸಂತೋಷ್, ಸಿರಿಗೆರೆಯ ಪರಶುರಾಮ್, ನಂದಿತಾವರೆ ರೇವಣಸಿದ್ದಪ್ಪ, ಕುಣೆಬೆಳಕೆರೆ ರುದ್ರಪ್ಪ, ಹಾಲಿವಾಣದ ಕೆ. ರೇವಣಸಿದ್ದಪ್ಪ, ಸಣ್ಣಪರಮೇಶ್ವರಪ್ಪ, ಮಲ್ಲನಾಯ್ಕನಹಳ್ಳಿ ಸಣ್ಣ ಶೇಖರಪ್ಪ, ಕೊಪ್ಪದ ಕಬ್ಬಾರ್ ಚಂದ್ರಪ್ಪ, ವೈ. ಕೃಷ್ಣಪ್ಪ, ಬಿಳಸನೂರಿನ ಶಶಿರೆಡ್ಡಿ, ಹರಿಹರದ ವಿದ್ಯಾ, ಯಲವಟ್ಟಿ ಕೊಟ್ರೇಶ್ ನಾಯ್ಕ, ಕುಂಬಳೂರಿನ ಶಂಕರಗೌಡ, ಮಲೇಬೆನ್ನೂರಿನ ಪೂಜಾರ್ ಪರಮೇಶ್ವರಪ್ಪ, ಪಿ.ಹೆಚ್. ಶಿವು, ಮೆಡಿಕಲ್ ಶಾಪ್ ರಾಜು, ಕೊಮಾರನಹಳ್ಳಿಯ ಉದ್ದಣ್ಣರ ಅಣ್ಣೇಶ್ ಇನ್ನಿತರರು ಹಾಜರಿದ್ದರು.

# ನಗರದಲ್ಲಿ ನಾಳೆ ನಾಟಕೋತ್ಸವ

ದಾವಣಗೆರೆ, ಆ.17- ಸ್ಥಳೀಯ ಶ್ರೀ ಗುರು ವಾದ್ಯ ವೃಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಕೆ.ಬಿ.ಆರ್ ಡ್ರಾಮಾ ಕಂಪನಿ ಇವರ ಸಹಯೋಗದೊಂದಿಗೆ ನಾಟಕ ಪ್ರದರ್ಶನವು ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ನಾಡಿದ್ದು ದಿನಾಂಕ 19 ರ ಗುರುವಾರ ಸಂಜೆ 6.30 ಕ್ಕೆ ನಡೆಯಲಿದೆ ಎಂದು ಚಿಂದೋಡಿ ಶಂಭುಲಿಂಗಪ್ಪ ತಿಳಿಸಿದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಹೊಸ ಮನೆ ಮಾರಾಟಕ್ಕಿದೆ**
ಸಿದ್ದಗಂಗಾ ಬಡಾವಣೆ, ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗ 30x40 ಅಳತೆಯ ಉತ್ತರಕ್ಕೆ ಮುಖವಿರುವ ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
94489 23785
95359 67499

**ಮನೆಗಳು ಲೀಜ್‌ಗೆ/ಬಾಡಿಗೆಗೆ ಇವೆ**
ನಗರದ. ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1 ಮತ್ತು 2ನೇ ಮಹಡಿ, ಪೂರ್ವ ಬಾಗಿಲು ಇರುವ ಮನೆಗಳು ಲೀಸ್ ಗೆ / ಬಾಡಿಗೆಗೆ ಇವೆ.
ಸಂಪರ್ಕಿಸಿ: 97417 46205
84312 55250, 99022 99961

**ಗೋಡೌನ್ ಬಾಡಿಗೆಗಿದೆ**
ಬಂಬೂಬಜಾರ್ ಹತ್ತಿರ, ಬಸಾಪುರ ರಸ್ತೆಯಲ್ಲಿ ವಿವಿಧ ಅಳತೆಯ ಗೋಡೌನ್‌ಗಳು ಬಾಡಿಗೆಗೆ ಇವೆ.
ಸಂಪರ್ಕಿಸಿ :
ಮೊ. : 98445 37171

**ಮನೆಗಳು ಮಾರಾಟಕ್ಕಿವೆ**
40x60 North, ಮೂರು ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ, 30x50 North ನಾಲ್ಕು ಬೆಡ್ ರೂಂ ಡೂಪ್ಲೆಕ್ಸ್, ಹೊಸ ಮನೆ, ಸರಸ್ವತಿ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹರಪನಹಳ್ಳಿಯಲ್ಲಿ ಮನೆ ಮಾರಾಟಕ್ಕಿದೆ**
ಹರಪನಹಳ್ಳಿ ಪಟ್ಟಣದ ಕುರುಬರಗೇರಿ ರಸ್ತೆಗೆ ಹೊಂದಿಕೊಂಡಂತಿರುವ 22×55 ಅಡಿ ಅಳತೆಯ ಎರಡು ಅಂತಸ್ತಿನ RCC ಬಿಲ್ಡಿಂಗ್ ಮಾರಾಟಕ್ಕಿದೆ. ಕೊಳ್ಳಲಿಚ್ಛಿಸುವವರು ಸಂಪರ್ಕಿಸಿರಿ :
ಮೊ. : 97439 78754

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬೇಕಾಗಿದ್ದಾರೆ**
ಶಾಲೆಯಲ್ಲಿ ಕೆಲಸ ಮಾಡಲು ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಹಾಗೂ ಟ್ಯಾಲಿಯಲ್ಲಿ ಅನುಭವವುಳ್ಳ ಮಹಿಳೆಯರು ಮತ್ತು ವಾಚ್‌ಮೆನ್ ಬೇಕಾಗಿದ್ದಾರೆ-03 Post
97425 18228, 94492 66133

**ಹೊಸ ಮನೆ ಲೀಸ್‌ಗೆ / ಮಾರಾಟಕ್ಕೆ**
ಬಾಡಾ ಕ್ರಾಸ್ ಜೈನ್ ಕಾಲೇಜ್ ಹತ್ತಿರ 3ಬೆಡ್ ರೂಂ 3ಬಾತ್ ರೂಮ್ ಇರುವ ಹೊಸ ಮನೆ ಲೀಸ್ ಗೆ ಮತ್ತು ಮಾರಾಟಕ್ಕೆ ಇರುತ್ತದೆ. ಸಂಪರ್ಕಿಸಿ
84949 88799

**1BHK HOUSE FOR RENT**
Ground floor 14th cross, Siddaveerappa layout, Davangere.
Contact No: 99644 66761

**ಸೈಟ್‌ಗಳು ಮಾರಾಟಕ್ಕಿವೆ**
30x40 North, 30x50 North, 50x68 Corner ಆಂಜನೇಯ ಬಡಾವಣೆಯಲ್ಲಿ, 30x40 West, 30x40 North, 40x50 Corner ವಿನಾಯಕ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
EICHER Tractor Show Room
ITI, Diploma ಅಭ್ಯರ್ಥಿಗಳು ಬೇಕಾಗಿದ್ದಾರೆ. ಡಿ.ಎಲ್ ಮತ್ತು ಬೈಕ್ ಇದ್ದವರಿಗೆ ಆದ್ಯತೆ.
ಶಾರದಾ ಆಟೋಸ್ ದಾವಣಗೆರೆ.
sharadaautosdavanagere@gmail.com
87479 09727

**ಲೀಸ್ 12 ಲಕ್ಷ/ಬಾಡಿಗೆ 13,000**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**WANTED TEACHERS**
BSc, B.Ed (CBZ) -2
BSc,M.Sc -2
BA, B.Ed (English major)-2
BA, BEd -3
ACM School, Devaraj Urs Lay-out, 'C' block, 2nd Cross. Dvg.
8970321855, 8296502675

**WANTED TELECALLER**
(Female)
# 3367/1 Arunoday M.C.C Block, Shamnuru Road, opp Asharya Hospital, Davanagere.
Call 78929 94180

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266

**WANTED**
Sales Boys, Sales Girls, Helpers
63631 97523

**WANTED**
LADY TEACHERS
B.A.B.Ed. (English)-03, B.Sc. B.Ed. (PCM)-03, B.Sc. B.Ed. (CBZ)-03, D.Ed.-03, B.E-03,
97425 18228, 94492 66133

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ -ದಾವಣಗೆರೆ
(owners only Call me)
74112 50447

**Tutions**
From 6 th to 10 std
Bruit and vedic Maths
97390 66956

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**REQUIRED**
Required Experienced Office Assistant Having Knowledge in Tally and GST FILING.
Contact
99000 22030

**ಕೆಲಸಗಾರರು ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಲಾಡ್ಜಿಂಗ್ & ಬೋರ್ಡಿಂಗ್ ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
98862 87539
99013 57225

**WANTED**
Medical Representatives for generic company. Freshers and expirienced candidate will apply. Qualification any degree.
Company
Obesea thormacose pvt. ltd.
Beside Alur Manjunath Hospital P.J. Exte - Davangere.
Contact : 95132 22192

**WANTED**
Tally experience with 2-3 years. Boys only
C.K. Associates Chowkipete.
Opp new masjid. Davanagere
9353232533

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**TO-LET**
2 BHK available for rent.
"Kalleshwara Nilaya"
First floor, 6th main 6th cross, MCC 'A'block, Davangere.
Near Thogataveera Kalyana Mantapa.
PH NO : 9066328227

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ತಕ್ಷಣ ಬೇಕಾಗಿದ್ದಾರೆ**
ಟೂರ್ಸ್ & ಟ್ರಾವೆಲ್ಸ್ ಆಫೀಸ್‌ನಲ್ಲಿ ಕಾರ್ಯ ನಿರ್ವಹಿಸಲು ಕಂಪ್ಯೂಟರ್ ತಿಳಿದಿರುವಂತಹ ಮಹಿಳೆ ಬೇಕಾಗಿದ್ದಾರೆ.
ಸಮಯ 10 ರಿಂದ 6 ವರೆಗೆ
99006 66122
70195 88370

**ಬೇಕಾಗಿದ್ದಾರೆ**
ಆಫೀಸ್ ನಿರ್ವಹಣೆಗೆ ಪದವೀಧರರು(Female) ಬೇಕಾಗಿದ್ದಾರೆ.(B.Com,BBA & BA)ಉತ್ತಮ ವಾಕ್ಚಾತುರ್ಯ, ಹಲವು ಭಾಷೆಗಳನ್ನು ಬಲ್ಲವರಿಗೆ ಹೆಚ್ಚಿನ ಆದ್ಯತೆ.ಸಂಬಳ: 8,000/- ದಿಂದ 10,000/-
ಸಂಪರ್ಕಿಸಿ: CARTA INDUSTRIES
Opp:Anna Nagar, Basapur Road, DAVANGERE
77955 55193

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಅಮರಾವತಿ ಹಾಲಪ್ಪ
98454 84076

**ಆಸ್ತಿ ಖರೀದಿಸಿರುವ ಬಗ್ಗೆ**
ನೀವು ಕ್ರಯಕ್ಕೆ ಖರೀದಿಸಿ ಮುಂಗಡ ಹಣ ನೀಡಿದ್ದರೂ ನಿಮ್ಮ ಹೆಸರಿಗೆ ಕ್ರಯಪತ್ರ ರಿಜಿಸ್ಟರ್ ಆಗಿರದ ಮನೆ, ಸೈಟು, ಜಮೀನುಗಳ ಬಗ್ಗೆ ಇರತಕ್ಕ ತಕರಾರನ್ನು ಪರಿಹರಿಸಿಕೊಳ್ಳಲು ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196

**ವಾರದ ಚೀಟಿ ಪ್ರಾರಂಭ**
ರೂ.1 ಲಕ್ಷದ ಚೀಟಿ ಪ್ರಾರಂಭ
50 ವಾರಗಳು & 50 ಸದಸ್ಯರು
2000/- ರೂ ಕಂತು ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ)
84531 61869

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

# ಸೇಂಟ್ ಜಾನ್ಸ್ ಶಾಲೆಯಲ್ಲಿ ಕೊರೊನಾ ವಾರಿಯರ್ಸ್‌ಗಳಿಗೆ ಸನ್ಮಾನ




ದಾವಣಗೆರೆ, ಆ.17 - ನಗರದ ಸೇಂಟ್ ಜಾನ್ಸ್ ಶಾಲೆಯಲ್ಲಿ ನಡೆದ 75ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಕೊರೊನಾ ವಾರಿಯರ್ಸ್ ರವರ ಸೇವೆಯನ್ನು ಸ್ಮರಿಸಿ, ನೇತ್ರಾವತಿ, ಚಂದ್ರಕಲಾ, ಶೃತಿ, ಜ್ಯೋತಿ, ತ್ರಿವೇಣಿ, ಮಿಲನ, ರೇಖಾ, ಸುಹಾಸಿನಿ ಮತ್ತು ಪ್ರಶಾಂತ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು. ಯುವ ಕಾಂಗ್ರೆಸ್ ಮುಖಂಡ ಗಣೇಶ್ ಹುಲ್ಲುಮನೆ ಮತ್ತು ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ ಅವರುಗಳು ಸನ್ಮಾನ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಪ್ರಾಂಶುಪಾಲರು, ಶಿಕ್ಷಕರು, ಆಸಕ್ತ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಸುಡೊಕು ಜನಕ ಕಾಜಿ ಇನ್ನಿಲ್ಲ

(3ನೇ ಪುಟದಿಂದ) ಮಾಡಿಕೊಂಡಿತ್ತು.

ಜಪಾನ್‌ನ ಮೊದಲ ಒಗಟಿನ ಪತ್ರಿಕೆಯನ್ನು ಅವರು ಆರಂಭಿಸಿದ್ದರು. 1983ರಲ್ಲಿ ನಿಕೊಲಿ ಕಂಪನಿಯನ್ನು ಆರಂಭಿಸಿದ್ದ ಅವರು, ಅದೇ ಸಮಯದಲ್ಲಿ ಸುಡೊಕು ಕಂಡು ಹಿಡಿದಿದ್ದರು.

# ಪಡಿತರಕ್ಕೆ ಬೆರಳಚ್ಚು ಗುರುತು : ನಗರದಲ್ಲಿ ಪ್ರತಿಭಟನೆ

ದಾವಣಗೆರೆ, ಆ.17 - ಪಡಿತರ ವ್ಯವಸ್ಥೆಯಲ್ಲಿ ಆಹಾರ ಧಾನ್ಯ ನೀಡಲು ಬಿಪಿಎಲ್ ಕುಟುಂಬಗಳ ಸದಸ್ಯರ ಬೆರಳಚ್ಚುಗುರುತು ಪಡೆದುಕೊಳ್ಳುತ್ತಿರುವುದನ್ನು ಖಂಡಿಸಿ ಮತ್ತು ವಿದ್ಯುತ್ ಕಾಯ್ದೆ-2020 ಅನ್ನು ವಿರೋಧಿಸಿ ಸ್ಲಂ ಜನಾಂದೋಲನ ಕರ್ನಾಟಕ, ಸಾವಿತ್ರಿ ಬಾಪುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಇಂದು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ನಂತರ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಸಲ್ಲಿಸಲಾಯಿತು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಕಳೆದ 7 ವರ್ಷಗಳಿಂದ ಬಡ ಜನ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದು ಸಂವಿಧಾನ ವಿರೋಧಿ ನಡೆಯಿಂದ ದೇಶದ ಜನಸಾಮಾನ್ಯರಿಗೆ ಅಗತ್ಯವಿರುವ ಯೋಜನೆಗಳನ್ನು ಕೈ ಬಿಟ್ಟು ಕಾರ್ಪೊರೇಟ್ ಕಂಪನಿಗಳ ಕೈಗೊಂಬೆಯಾಗಿ ದೇಶದ ಎಲ್ಲಾ ಸೇವಾ ವಲಯಗಳನ್ನು ಖಾಸಗೀಕರಣಗೊಳಿಸುವ ಮೂಲಕ ದೇಶದ ಬಡ ಜನರಿಗೆ, ರೈತರಿಗೆ ಮತ್ತು



ಸ್ಲಂ ಜನಾಂದೋಲನ ಕರ್ನಾಟಕ ನೇತೃತ್ವದಲ್ಲಿ ಖಂಡನೆ

ಕೂಲಿ ಕಾರ್ಮಿಕರಿಗೆ ಅನ್ಯಾಯ ಮಾಡಿದೆ ಎಂದು ಸಂಘಟನೆಯ ಅಧ್ಯಕ್ಷೆ ಶಾಹಿನಾ ಬೇಗಂ ಆರೋಪಿಸಿದರು.

ಇತ್ತೀಚಿಗೆ ರಾಜ್ಯ ಸರ್ಕಾರ ಆಹಾರ ಇಲಾಖೆಯಿಂದ ಬಿಪಿಎಲ್ ಪಡಿತರ ಕುಟುಂಬಗಳು ತಮ್ಮ ಬೆರಳಚ್ಚು ಗುರುತುಗಳನ್ನು ನೀಡಿ ಪಡಿತರ ಪಡೆಯುವುದನ್ನು ಕಡ್ಡಾಯಗೊಳಿಸಿರುವುದರಿಂದ ರಾಜ್ಯದ ಬಿಪಿಎಲ್ ಪಡಿತರ ಕುಟುಂಬಗಳು ಉದ್ಯೋಗಕ್ಕಾಗಿ ಇತರೆ ಪ್ರದೇಶಗಳಿಗೆ ತೆರಳಿರುವುದರಿಂದ ಆಹಾರ ಪದಾರ್ಥ ಪಡೆಯಲು ಹರಸಾಹಸಪಡುವಂತಾಗಿದೆ. ಆದ್ದರಿಂದ ರಾಜ್ಯ ಸರ್ಕಾರವು ಕೂಡಲೇ ಜನವಿರೋಧಿ ಬಯೋಮೆಟ್ರಿಕ್ ಪದ್ಧತಿಯನ್ನು ಕೈಬಿಡಬೇಕು ಎಂದು ಗೌರವಾಧ್ಯಕ್ಷ ಶಬ್ಬೀರ್ ಸಾಬ್ ಒತ್ತಾಯಿಸಿದರು.

ರಾಜ್ಯದಲ್ಲಿ ಯಾವುದೇ ನೆಪದಲ್ಲಿ ಬಡವರ ಆಧಾರ ಸ್ತಂಭವಾಗಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಬಾರದು. ಬಿಪಿಎಲ್ ಪಡಿತರ ಚೀಟಿಗೆ ನೀಡಲಾಗಿರುವ ಆಹಾರ ಧಾನ್ಯಗಳನ್ನು ನಿಲ್ಲಿಸಬಾರದು. ಪಡಿತರ ಚೀಟಿಗಾಗಿ ನಿಗದಿಗೊಳಿಸಿರುವ ಮಾನದಂಡಗಳು, ಲಕ್ಷಾಂತರ ಪಡಿತರ ಚೀಟಿಯನ್ನು ರದ್ದುಗೊಳಿಸುವ ಹುನ್ನಾರ ಕೈ ಬಿಡಬೇಕು ಎಂದು ಪ್ರಧಾನ ಕಾರ್ಯದರ್ಶಿ ರೇಣುಕಮ್ಮ ಹಾವೇರಿ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಾವಿತ್ರಮ್ಮ, ಸಂಘಟನಾ ಕಾರ್ಯದರ್ಶಿ ಸುಹಿಲ್ ಬಾಷಾ, ಮಂಜುಳಾ, ಯೂಸೂಫ್ ಸಾಬ್, ಅಫ್ಜಲ್ ಬೇಗ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಲಯನ್ಸ್ ಪ್ರೌಢಶಾಲೆಗೆ 'ಎ' ಗ್ರೇಡ್




ದಾವಣಗೆರೆ, ಆ.17 - ನಗರದ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಗೆ 2020-21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ 37 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಶಾಲೆಗೆ ಅತ್ಯುತ್ತಮ ಶ್ರೇಣಿ - 1, ಡಿಸ್ಟಿಂಕ್ಷನ್ - 3, ಪ್ರಥಮ ಶ್ರೇಣಿ - 33 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಈ ಶಾಲೆಯನ್ನು ಎಸ್ಸೆಸ್ಸೆಲ್ಸಿ ಪರೀಕ್ಷಾ ಮಂಡಳಿಯು 'ಎ' ಗ್ರೇಡ್ ಶಾಲೆ ಎಂದು ಪರಿಗಣಿಸಿದೆ. ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಹಾಗೂ ಲಯನ್ಸ್ ಟ್ರಸ್ಟ್ ಮತ್ತು ಲಯನ್ಸ್ ಕ್ಲಬ್ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# 354.65 ಕೋ. ರೂ. ಕ್ರಿಯಾ ಯೋಜನೆಗೆ ಅನುಮೋದನೆ

ದಾವಣಗೆರೆ, ಆ.17 - ಜಿಲ್ಲಾ ಪಂಚಾಯ್ತಿಯ 2021-22 ನೇ ಸಾಲಿಗೆ 354.65 ಕೋಟಿ ರೂ. ಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳ ಕ್ರಿಯಾ ಯೋಜನೆಗೆ ಗುರುವಾರ ನಡೆದ ಜಿ.ಪಂ. ಸಾಮಾನ್ಯ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಜಿ.ಪಂ. ಕಾರ್ಯಕ್ರಮಗಳಡಿ 354.65 ಕೋಟಿ ರೂ., ತಾ.ಪಂ. ಕಾರ್ಯಕ್ರಮಗಳಡಿ 716.87 ಕೋಟಿ ರೂ., ಗ್ರಾ.ಪಂ. ಕಾರ್ಯಕ್ರಮಗಳಡಿ 35 ಲಕ್ಷ ರೂ. ಸೇರಿದಂತೆ ಒಟ್ಟಾರೆ ಈ ವರ್ಷ ಜಿಲ್ಲೆಗೆ 1,071.88 ಕೋಟಿ ರೂ. ಅನುದಾನ ನಿಗದಿಪಡಿಸಿದ್ದು, ಇದರಲ್ಲಿ ಜಿ.ಪಂ.ಗೆ ನಿಗದಿಪಡಿಸಿರುವ 354.65 ಕೋಟಿ ರೂ. ಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ.

ಹಂಚಿಕೆ ಮಾಡಲಾಗಿರುವ ಅನುದಾನದ ಪೈಕಿ ಸಾಮಾನ್ಯ ಶಿಕ್ಷಣ ವಲಯಕ್ಕೆ 160.27 ಕೋಟಿ ರೂ. ಗಳ ಅನುದಾನ ಅಂದರೆ ಶೇ. 45.19 ರಷ್ಟು ಅನುದಾನ ನಿಗದಿಪಡಿಸಲಾಗಿದೆ. ವೈದ್ಯಕೀಯ ಮತ್ತು ಜನಾರೋಗ್ಯ ವಲಯಕ್ಕೆ 47.32 ಕೋಟಿ ರೂ., ಕುಟುಂಬ ಕಲ್ಯಾಣ 24.52 ಕೋಟಿ, ಪರಿಶಿಷ್ಟ ಜಾತಿ ಕಲ್ಯಾಣ 25.64 ಕೋಟಿ, ಪರಿಶಿಷ್ಟ ಪಂಗಡ ಕಲ್ಯಾಣ-10.72 ಕೋಟಿ, ಹಿಂದುಳಿದ ವರ್ಗಗಳ ಕಲ್ಯಾಣ-37.03 ಕೋಟಿ ರೂ. ಸೇರಿದಂತೆ, 30 ವಿವಿಧ ಒಟ್ಟು ವಲಯಗಳಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣ ಮೀಸಲಿಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗೆ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನದಡಿ 5.41 ಕೋಟಿ ರೂ. ಗಳ ಅನುದಾನದ ವಿವಿಧ ಕಾರ್ಯಕ್ರಮಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು. ಇದೇ ವೇಳೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ರೂಪಿಸಲಾದ ಜಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಕೇವಲ ಜಲ್ಲಿ ಹಾಕಿ ರಸ್ತೆ ಅಭಿವೃದ್ಧಿ ಮಾಡುತ್ತೇವೆ ಎಂದು ಯೋಜನೆ ರೂಪಿಸಿರುವುದು ಸರಿಯಲ್ಲ, ರಸ್ತೆಗಳ ಸಂಖ್ಯೆ ಕಡಿಮೆಯಾದರೂ ಚಿಂತೆಯಿಲ್ಲ, ರಸ್ತೆಗಳನ್ನು ಸಂಪೂರ್ಣವಾಗಿ ಡಾಂಬರೀಕರಣ ಮಾಡಿದರೆ ಚೆನ್ನಾಗಿರುತ್ತದೆ. ಹೀಗಾಗಿ ಜಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗುವುದಿಲ್ಲ, ರಸ್ತೆಯನ್ನು ಡಾಂಬರೀಕರಣಗೊಳಿಸುವ ಪರಿಷ್ಕೃತ ಯೋಜನೆ ರೂಪಿಸಿ, ಅನುಮೋದನೆಗೆ ಸಲ್ಲಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಪ್ರಸಕ್ತ ಸಾಲಿನಲ್ಲಿ ಜಿ.ಪಂ.ಗೆ ಒದಗಿಸಲಾದ 15 ನೇ ಹಣಕಾಸು ಅನುದಾನದಡಿ 325.53 ಲಕ್ಷ ರೂ. ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗೂ ಅನುಮೋದನೆ ನೀಡಲಾಯಿತು.

ಪ್ರಸಕ್ತ ವರ್ಷ ಆಗಸ್ಟ್ ತಿಂಗಳಿನಲ್ಲಿಯೇ ಕ್ರಿಯಾಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಡಿಸೆಂಬರ್ ಒಳಗೆ ನಿಗದಿಪಡಿಸಿದ ಕಾಮಗಾರಿ ಹಾಗೂ ಕಾರ್ಯಕ್ರಮಗಳಿಗೆ ಅನುದಾನ ವೆಚ್ಚ ಮಾಡಿದಲ್ಲಿ, ಮಾರ್ಚ್ ವೇಳೆಗೆ ಇನ್ನಷ್ಟು ಹೆಚ್ಚುವರಿ ಅನುದಾನ ಲಭ್ಯವಾಗುತ್ತದೆ. ಅಧಿಕಾರಿಗಳು ಯಾವುದೇ ನೆಪ ಹೇಳದೆ, ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು ಎಂದು ಸೂಚಿಸಿದರು.

# ಕಂತು ಶುಲ್ಕ ಪಾವತಿಗೆ ಅವಕಾಶಕ್ಕೆ ಒತ್ತಾಯ

ದಾವಣಗೆರೆ, ಆ. 17 - ಕೊರೊನಾ ಹಿನ್ನೆಲೆಯಲ್ಲಿ ಜನರು ಸಂಕಷ್ಟದಲ್ಲಿರುವ ಕಾರಣ ಶಾಲಾ-ಕಾಲೇಜು ಶುಲ್ಕವನ್ನು ಕಂತುಗಳಲ್ಲಿ ಪಾವತಿ ಮಾಡಲು ಪೋಷಕರಿಗೆ ಅವಕಾಶ ನೀಡಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಆದೇಶ ಮಾಡುವಂತೆ ಆಮ್ ಆದ್ಮಿ ಪಕ್ಷ ಸರ್ಕಾರವನ್ನು ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಲ್. ರಾಘವೇಂದ್ರ, ಈ ಹಿಂದೆ ಸರ್ಕಾರವು ಬೋಧನಾ ಶುಲ್ಕದಲ್ಲಿ ಶೇ.70ರಷ್ಟು ಮಾತ್ರ ತೆಗೆದುಕೊಳ್ಳುವಂತೆ ಆದೇಶಿಸಿತ್ತು. ಆದರೆ ಶಾಲಾ-ಕಾಲೇಜುಗಳಲ್ಲಿ ಪೂರ್ತಿ ಶುಲ್ಕ ಕಟ್ಟದೆ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರಗಳನ್ನು ನೀಡುತ್ತಿಲ್ಲ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಮೀರ್ ಹಸನ್, ಆದಿಲ್ ಖಾನ್, ಇಬ್ರಾಹಿಂ ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ಹೋರಾಟಗಾರರ ಭವನ ನಿರ್ಮಿಸಲು ಒತ್ತಾಯ

ದಾವಣಗೆರೆ, ಆ.17 - ಜಿಲ್ಲಾ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಘದಿಂದ 75 ನೇ ಸ್ವಾತಂತ್ರ್ಯ ಮಹೋತ್ಸವದ ಸರಳ ಸಮಾರಂಭವನ್ನು ಹುಳ್ಳೇರ ಮರುಳಸಿದ್ದಪ್ಪ ನಿವಾಸದಲ್ಲಿ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ನಗರದ ಬ್ರಾಹ್ಮಣ ಸಮಾಜ ಸೇವಾ ಸಂಘದ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರರಾದ ಹುಳ್ಳೇರ ಮರುಳಸಿದ್ದಪ್ಪ ಮತ್ತು ಬಿ. ಹಾಲಪ್ಪ ಅವರುಗಳನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಸ್ವಾತಂತ್ರ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಹುಳ್ಳೇರ ಮರುಳಸಿದ್ದಪ್ಪ ಮಾತನಾಡಿ, ದೇಶದಲ್ಲಿ ಭ್ರಷ್ಟಾಚಾರ ಕಡಿಮೆಯಾಗಬೇಕು, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹನೀಯರ ಮನೆತನದವರು ಮತ್ತು ಅವರ ಪರಿವಾರದವರನ್ನು ಗುರುತಿಸುವ ಕಾರ್ಯ ಆಗಬೇಕು ಎಂದು ಒತ್ತಾಯಿಸಿದರು.

ಪಂಜಾಬ್, ಹರಿಯಾಣ ಮತ್ತು ಉತ್ತರಾಖಂಡದಲ್ಲಿ ಇರುವಂತೆ ಸ್ವಾತಂತ್ರ್ಯ ಹೋರಾಟಗಾರರ ಭವನವನ್ನು ನಿರ್ಮಿಸಬೇಕೆಂದು ಅವರು ಒತ್ತಾಯಿಸಿದರು. ಪ್ರಧಾನಮಂತ್ರಿ



ಸ್ವಾತಂತ್ರ್ಯ ಸೇನಾನಿಗಳಿಗೆ ಬ್ರಾಹ್ಮಣ ಸಮಾಜದಿಂದ ಸನ್ಮಾನ

ನರೇಂದ್ರ ಮೋದಿಯವರು ಕರೆಸಿ ಹಸ್ತಲಾಘವ ನೀಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದನ್ನು ಮರುಳಸಿದ್ದಪ್ಪ ಪ್ರಸ್ತಾಪಿಸಿದರು.

ಹುಳ್ಳೇರ ಮರುಳಸಿದ್ದಪ್ಪ ನವರಂತಹ ಮಹನೀಯರನ್ನು ಉಪೇಕ್ಷಿಸಿ ಸರ್ಕಾರವು ದಾವಣಗೆರೆಯಲ್ಲಿ ಗಾಂಧಿ ಭವನ ನಿರ್ಮಿಸಿರುವುದು ವಿಷಾದನೀಯ ಸಂಗತಿ ಎಂದು ಜೋಗಪ್ಪನವರ ಕಾಡಪ್ಪರ ಕೊಟ್ರಪ್ಪ ಅವರು ವ್ಯಾಕ್ಯುಲತೆ ವ್ಯಕ್ತಪಡಿಸಿದರು.

ಸಂಘದ ಕಾರ್ಯದರ್ಶಿ ಇಂದೂಧರ ನಿಶಾನಿಮಠ, ಶ್ರೀನಿವಾಸ ಕಾರಂತ್, ವಕೀಲ ಮಂಜುನಾಥ, ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದ ಸಂಗಪ್ಪನವರ ಮಗ ಹನುಮಂತಪ್ಪ, ಹುಳ್ಳೇರ ಶರಣಪ್ಪನವರ ಪತ್ನಿ ಶಿವಗಂಗಮ್ಮ, ಉಷಾರಾಣಿ, ಕಿರಣ್ ಬಾಳೆಹೊಲದ, ಬ್ರಾಹ್ಮಣ ಸಮಾಜದ ಅಧ್ಯಕ್ಷ ಎಸ್. ಪಿ. ಸತ್ಯನಾರಾಯಣರಾವ್, ಕಾರ್ಯ ದರ್ಶಿ ಯು. ಬಾಲಕೃಷ್ಣ ವೈದ್ಯ, ಉಪಾಧ್ಯಕ್ಷ ಡಾ. ಸಿ. ಕೆ. ಆನಂದತೀರ್ಥಾಚಾರ್, ಸಹ ಕಾರ್ಯದರ್ಶಿ ಡಿ. ಶೇಷಾಚಲ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಅಮೆರಿಕದ ಶಸ್ತ್ರಾಸ್ತ್ರ ತಾಲಿಬಾನ್ ವಶಕ್ಕೆ

(3ನೇ ಪುಟದಿಂದ) 2001ರಲ್ಲಿ ಆಫ್ಘಾನ್ ಹೋರಾಟದಲ್ಲಿ ಭಾಗಿಯಾಗಿದ್ದ ಕ್ರಿಸ್ ಮಿಲ್ಲರ್ ಹೇಳಿದ್ದಾರೆ. ಅವರು ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವಧಿಯಲ್ಲಿ ರಕ್ಷಣಾ ಕಾರ್ಯದರ್ಶಿಯಾಗಿದ್ದರು.

ಏಪ್ರಿಲ್‌ಗೆ ಮುಂಚೆಯೇ ಆಫ್ಘಾನ್ ಸರ್ಕಾರಿ ಪಡೆಗಳು ನಿಧಾನವಾಗಿ ಯುದ್ಧದಲ್ಲಿ ಸೋಲುತ್ತಿದ್ದವು. ಆದರೆ, ಅಮೆರಿಕದ ಸಹಭಾಗಿಗಳು ವಾಪಸ್ ಹೋಗಲಿದ್ದಾರೆ ಎಂಬ ಸುದ್ದಿ ಕಾಡ್ಗಿಚ್ಚಿ ನಂತೆ ಹರಡಿ ವೈಫಲ್ಯಕ್ಕೆ ಕಾರಣವಾಯಿತು ಎಂದವರು ಹೇಳಿದ್ದಾರೆ. ಆಫ್ಘಾನ್ ಪಡೆಗಳು ಸಂಪೂರ್ಣ ವಾಗಿ ಅಮೆರಿಕವನ್ನು ಅವಲಂಬಿಸಿದ್ದವು. ವೇತನ ಸಹ ಅಮೆರಿಕದಿಂದ ಬರುತ್ತಿತ್ತು. ಕೆಲವೊಮ್ಮೆ ಹಣ ಹಾಗೂ ಲೆಕ್ಕಕ್ಕೆ ಸಿಗದಷ್ಟು ಇಂಧನವನ್ನು ಭ್ರಷ್ಟ ಅಧಿಕಾರಿ ಗಳು ಕಬಳಿಸುತ್ತಿದ್ದರು. ನಕಲಿ ಸೈನಿಕರನ್ನು ರೂಪಿಸಿ ದುಂದುವೆಚ್ಚ ಮಾಡಿದ ಘಟನೆಗಳೂ ವರದಿಯಾಗಿದ್ದವು.

# ಸಂಘ-ಸಂಸ್ಥೆಗಳ ಚುನಾವಣೆ 6 ತಿಂಗಳು ಮುಂದೂಡಿಕೆ

ದಾವಣಗೆರೆ, ಆ.17 - ರಾಜ್ಯಾದ್ಯಂತ ಕೋವಿಡ್-19 ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ನೋಂದಾಯಿತ ಸೊಸೈಟಿಗಳ, ಸಂಘ-ಸಂಸ್ಥೆಗಳ ಸಾರ್ವಜನಿಕ ಚುನಾವಣೆಗಳನ್ನು, ಉಪಚುನಾವಣೆಗಳನ್ನು ಹಾಗೂ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗಳನ್ನು ಕಳೆದ ಏ.26 ರಿಂದ ಮುಂದಿನ ಆರು ತಿಂಗಳ ಅವಧಿಗೆ ಮುಂದೂಡಲಾಗಿದೆ.

ಜಿಲ್ಲೆಯಲ್ಲಿ ನೋಂದಣಿಯಾಗಿರುವ ಸೊಸೈಟಿಗಳು, ಸಂಘ-ಸಂಸ್ಥೆಗಳು ಈ ಸೂಚನೆಯನ್ನು ತಪ್ಪದೇ ಪಾಲಿಸಬೇಕು ಎಂದು ದಾವಣಗೆರೆ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕ ಬಿ. ಜಯಪ್ರಕಾಶ್ ತಿಳಿಸಿದ್ದಾರೆ.

## ಹಬ್ಬ ಸಾರ್ವಜನಿಕ ಆಚರಣೆ ಇಲ್ಲ

(3ನೇ ಪುಟದಿಂದ) ಮೂರ್ತಿ ಬಳಕೆಯನ್ನು ನಿಷೇಧಿಸಲಾಗಿದೆ ಎಂದರು.

**ಮೊಹರಂ ಆಚರಣೆಗೆ ಸರ್ಕಾರದ ಮಾರ್ಗಸೂಚಿ:** ಸಾರ್ವಜನಿಕ ಸ್ಥಳಗಳಲ್ಲಿ ಆಲಂಗಳನ್ನು ಅಥವಾ ಪಂಜಾ ಸ್ಥಾಪಿಸುವುದನ್ನು ಹಾಗೂ ತಾಜಿಯಾವನ್ನು ನಿರ್ಬಂಧಿಸಲಾಗಿದೆ. ಆ.12 ರಿಂದ 20 ರವರೆಗೆ ಮೊಹರಂ ಪ್ರಾರ್ಥನಾ ಸಭೆ ಮತ್ತು ಮೆರವಣಿಗೆ ನಿಷೇಧಿಸಲಾಗಿದೆ. ಸೂಕ್ತದೈಹಿಕ ಅಂತರ ಪಾಲಿಸಿ ಕನಿಷ್ಠ ಸಂಖ್ಯೆಯಲ್ಲಿ ಭಾಗಿಯಾಗಬಹುದು. ಪಂಜಾ, ಆಲಂ ಮತ್ತು ತಾಜಿಯತ್‌ಗಳನ್ನು ಜನರು ಮುಟ್ಟಬಾರದು. ಖಬರಸ್ಥಾನ್ ಒಳಗೊಂಡಂತೆ ಯಾವುದೇ ಖಾಲಿ ಜಾಗಗಳಲ್ಲಿ ಸಭೆ ಏರ್ಪಡಿಸುವುದನ್ನು ನಿರ್ಬಂಧಿಸಲಾಗಿದ್ದು, ದಫನ ಮಾಡಲು ಅನುಮತಿ ನೀಡಲಾಗಿದೆ. 60 ವರ್ಷಕ್ಕಿಂತ ಮೇಲ್ಪಟ್ಟವರು ಹಾಗೂ 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮನೆಯಲ್ಲಿಯೇ ಪ್ರಾರ್ಥನೆ ಮಾಡಬೇಕು.

ಹಿಂದೂ ಸಮಾಜದ ಮುಖಂಡ ಕೆ.ಬಿ.ಶಂಕರ ನಾರಾಯಣ್, ಮುಸ್ಲಿಂ ಸಮಾಜದ ಮುಖಂಡ ಸಿರಾಜ್ ಅಹ್ಮದ್, ಪಾಲಿಕೆ ಸದಸ್ಯ ಸ್ವಾಗಿ ಶಾಂತಕುಮಾರ್ ಮಾತನಾಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ. ರಾಜೀವ್, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್ ಇತರರು ಸಭೆಯಲ್ಲಿದ್ದರು.

## ತೆರವಿಗೆ ನಿವೇಶನದಾರರ ವಿರೋಧ

(3ನೇ ಪುಟದಿಂದ) ಗಡುವು ನೀಡಿ, ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದೇವೆ ಎಂದು ಪತ್ರಕರ್ತರಿಗೆ ತಿಳಿಸಿದರು. ಸೋಮವಾರದೊಳಗೆ ಎಲ್ಲಾ ದಾಖಲಾತಿಗಳನ್ನು ದೂಡಾಕ್ಕೆ ನೀಡಿ, ಶುಲ್ಕ ಪಾವತಿಸಿ ಅಕ್ರಮ ಬಡಾವಣೆಗಳನ್ನು ಸಕ್ರಮಗೊಳಿಸಿಕೊಳ್ಳಬೇಕು. ಕಾನೂನು ಚೌಕಟ್ಟಿನಲ್ಲಿ ಬಡಾವಣೆ ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಅನಧಿಕೃತ ಬಡಾವಣೆ ನಿರ್ಮಾಣಕ್ಕೆ ಇನ್ನು ಮುಂದೆ ಯಾವುದೇ ಕಾರಣಕ್ಕೂ ಆಸ್ಪದ ನೀಡುವುದಿಲ್ಲ ಎಂದು ಮುನ್ನೆಚ್ಚರಿಸಿದರು. ಈ ಸಂದರ್ಭದಲ್ಲಿ ದೂಡಾ ಅಧಿಕಾರಿ ಶ್ರೀಕರ್ ಸೇರಿದಂತೆ ಇತರರು ಇದ್ದರು.

# ಡಾ. ಹೆಚ್. ಗಿರಿಜಮ್ಮ ಇನ್ನಿಲ್ಲ

(3ನೇ ಪುಟದಿಂದ) ಬೆಳವಣಿಗೆ ಮುಂತಾದವು ಗಿರಿಜಮ್ಮ ಅವರ ಜನಪ್ರಿಯ ವೈದ್ಯಕೀಯ ಕೃತಿಗಳಲ್ಲಿ ಸೇರಿವೆ. ಅವರ 'ಮೇಘ ಮಂದಾರ' ಕೃತಿ ಅಂಬರೀಷ್ ಅಭಿನಯದ ಚಲನ ಚಿತ್ರವಾಗಿತ್ತು. ಕಿರುತೆರೆಯ ಅನೇಕ ಧಾರಾವಾಹಿಗಳಿಗೆ ಅವರ ಕಥೆಗಳು ಬಳಕೆಯಾಗಿದ್ದವು. 'ಕಾಡುತಾವ ನೆನಪುಗಳು' ಅವರ ಆತ್ಮಕಥೆ.

ಡಾ. ಗಿರಿಜಮ್ಮ ಅವರು, ರಾಜ್ಯದ ಇತರೆಡೆಗಳಲ್ಲಿ ಅಲ್ಲದೇ ಬೆಂಗಳೂರಿನಲ್ಲಿ 20 ವರ್ಷಗಳ ಸುದೀರ್ಘ ಅವಧಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದಾರೆ. ವೈದ್ಯಕೀಯ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. 2006 ವರ್ಷದಲ್ಲಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. ಕನ್ನಡ ಸಾಹಿತ್ಯ ಪರಿಷತ್ ಬಿ. ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ ನೀಡಿತ್ತು. ಕನ್ನಡ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ ಸೇರಿದಂತೆ ಹತ್ತಾರು ಗೌರವ ಪುರಸ್ಕಾರಗಳಿಗೆ ಗಿರಿಜಮ್ಮ ಭಾಜನರಾಗಿದ್ದರು.

ಗಿರಿಜಮ್ಮ ಅವರು ಹರಿಹರದಲ್ಲಿ ಶಾರದಾ ನರ್ಸಿಂಗ್ ಹೋಂ ನಡೆಸುತ್ತಿದ್ದ ಸಂದರ್ಭದಲ್ಲಿ ಬಡವರ ಪಾಲಿನ ವೈದ್ಯರಾಗಿ ಜನಪ್ರಿಯರಾಗಿದ್ದರು. ಬೆಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿಯಾದ ನಂತರ ನಗರದ ಎಸ್. ಎಸ್.ಹೈಟೆಕ್ ಆಸ್ಪತ್ರೆಯಲ್ಲಿ ಸೇವೆ ಆರಂಭಿಸಿದ್ದರು. ಇಲ್ಲೂ ಸಹ ಬಡವರ ಸೇವೆ ಮಾಡಬೇಕು ಎಂಬ ಆಶಯದಿಂದ ಭಾಷಾ ನಗರದ ಆಸ್ಪತ್ರೆಯನ್ನು ಕೇಳಿ, ಅಲ್ಲಿ ಸೇವೆ ಸಲ್ಲಿಸಿದ್ದರು ಎಂದು ಹಿರಿಯ ವೈದ್ಯ ಡಾ.ಸುರೇಶ್ ಹನಗವಾಡಿ ಅವರು ಗಿರಿಜಮ್ಮ ಅವರ ವ್ಯಕ್ತಿತ್ವ ಮತ್ತು ವೈದ್ಯಕೀಯ, ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಮೆಲುಕು ಹಾಕಿದ್ದಾರೆ.

**ಶ್ರದ್ಧಾಂಜಲಿ :** ಡಾ. ಗಿರಿಜಮ್ಮ ಅವರ ನಿಧನಕ್ಕೆ ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಗಿರಿಜಮ್ಮ ಅವರ ಅಂತ್ಯಕ್ರಿಯೆಯಲ್ಲಿ ಕುಂ. ವೀರಭದ್ರಪ್ಪ ಅವರಲ್ಲದೇ, ಹಿರಿಯ ವೈದ್ಯ ಡಾ.ಸುರೇಶ್ ಹನಗವಾಡಿ, ಡಾ.ರಮೇಶ್, ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್ ಮತ್ತಿತರರು ಭಾಗವಹಿಸಿದ್ದರು.

ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಹಿರಿಯ ಕಲಾವಿದ ಆರ್.ಟಿ. ಅರುಣ್‌ಕುಮಾರ್, ಸಾಹಿತಿ ಶ್ರೀಮತಿ ಹೆಚ್.ಕೆ.ಸತ್ಯಭಾಮ ಮಂಜುನಾಥ್ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಗಿರಿಜಮ್ಮ ನಿಧನಕ್ಕೆ ಸಂತಾಪ ಸೂಚಿಸಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಕಸಾಪ ಪ್ರತಿಷ್ಠಿತ 'ಮಹಾಲಿಂಗ ರಂಗ' ಪ್ರಶಸ್ತಿಯನ್ನು ಗಿರಿಜಮ್ಮ ಅವರಿಗೆ ನೀಡಲಾಗಿತ್ತು. ಅಲ್ಲದೇ, 2017ರಲ್ಲಿ ಜಿಲ್ಲಾ ಕಸಾಪದಿಂದ ನಡೆದ ಜಿಲ್ಲಾ ಪ್ರಥಮ ಮಹಿಳಾ ಸಾಹಿತ್ಯ ಸಮಾವವೇಶವನ್ನು ಡಾ. ಗಿರಿಜಮ್ಮ ಅವರ ಅಧ್ಯಕ್ಷತೆಯಲ್ಲಿ ನಡೆಸಿದ್ದನ್ನು ಕುರ್ಕಿ ಸ್ಮರಿಸಿದ್ದಾರೆ.

## ಗುಣವಾದವರು ಕ್ಷಯ ಪರೀಕ್ಷೆ ಮಾಡಿಸಿಕೊಳ್ಳಿ

(3ನೇ ಪುಟದಿಂದ) ಆಂದೋಲನ ನಡೆಸಲಾಗುತ್ತದೆ ಎಂದರು.

ಕೋವಿಡ್ 3 ನೇ ಅಲೆ ಮಕ್ಕಳ ಮೇಲೆ ಪರಿಣಾಮ ಬೀರಲಿದೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ, ಹೊಸ ಕಾರ್ಯಕ್ರಮ ರೂಪಿಸಲಾಗಿದೆ. ರಾಜ್ಯದಲ್ಲಿ ಒಂದೂವರೆ ಕೋಟಿ ಮಕ್ಕಳಿದ್ದು, ಎಲ್ಲರಿಗೂ ಆರೋಗ್ಯ ತಪಾಸಣೆ ಕಾರ್ಯಕ್ರಮ 'ಆರೋಗ್ಯ ನಂದನ'ಕ್ಕೆ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ.

ಈ ಯೋಜನೆಯಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವ ಮಕ್ಕಳನ್ನು ಗುರುತಿಸಿ, ಪೌಷ್ಠಿಕ ಆಹಾರ ನೀಡಲಾಗುವುದು. ಮುನ್ನೆಚ್ಚರಿಕೆ ಕ್ರಮ ವಹಿಸಿ ಮಕ್ಕಳ ಆರೋಗ್ಯ ಸುಧಾರಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಡಿಸೆಂಬರ್ ಒಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡುವ ಗುರಿ ಇದೆ. ದೆಹಲಿಗೆ ಪ್ರವಾಸ ಮಾಡಿ ಸಂಬಂಧಿಸಿದ ಕೇಂದ್ರ ಸಚಿವರೊಂದಿಗೆ ಸಮಾಲೋಚಿಸಿ ಹೆಚ್ಚು ಲಸಿಕೆ ಬೇಡಿಕೆ ಇಡಲಾಗುವುದು. ಶೇ.25 ರಷ್ಟು ಲಸಿಕೆಯನ್ನು ಖಾಸಗಿ ಕ್ಷೇತ್ರಕ್ಕೆ ನೀಡಬಹುದು. ಕಂಪನಿಗಳು ಸಿಎಸ್‌ಆರ್‌ನಡಿ ಲಸಿಕೆ ಖರೀದಿಸಿ ಸರ್ಕಾರಕ್ಕೆ ನೀಡಿ ಎಂದು ಮನವಿ ಮಾಡಲಾಗುತ್ತಿದೆ. ಇದರಿಂದ ಲಸಿಕೆ ದೊಡ್ಡ ಪ್ರಮಾಣದಲ್ಲಿ ಲಭ್ಯವಾಗಿ ವೇಗವಾಗಿ ಲಸಿಕೆ ನೀಡಲು ಸಾಧ್ಯವಾಗುತ್ತದೆ ಎಂದರು.

# ಸೌಲಭ್ಯಗಳ ದುರುಪಯೋಗ ಬೇಡ : ಜಿಲ್ಲಾಧಿಕಾರಿ ಬೀಳಗಿ ಸೂಚನೆ

ದಾವಣಗೆರೆ, ಆ.17 - ಮಹಾನಗರ ಪಾಲಿಕೆ ವತಿಯಿಂದ ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಗಳಿಗೆ ನೀಡಿರುವ ಬೀದಿಬದಿ ತಳ್ಳುವ ಗಾಡಿ, ಜೆರಾಕ್ಸ್ ಯಂತ್ರ, ಹೊಲಿಗೆ ಯಂತ್ರಗಳನ್ನು ಪಡೆದ ಫಲಾನುಭವಿಗಳ ಮನೆಗೆ ಖುದ್ದಾಗಿ ತೆರಳಿ ಅವರು ಇವುಗಳ ಸದುಪಯೋಗ ಪಡೆದುಕೊಳ್ಳುತ್ತಿರುವುದರ ಕುರಿತು ಪರೀಕ್ಷೆ ನಡೆಸಿ ಮಾಹಿತಿ ಕಲೆಹಾಕಬೇಕು. ದುರುಪಯೋಗ ಪಡಿಸಿಕೊಂಡಿದ್ದಲ್ಲಿ ಅಂತಹವರ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಗುರುತಿನ ಚೀಟಿಯನ್ನು ರದ್ದುಮಾಡಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಮೇಲ್ವಿಚಾರಣಾ ಸಮಿತಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಪಾಲಿಕೆ ವತಿಯಿಂದ 20 ಜನರಿಗೆ ಬೀದಿಬದಿ ತಳ್ಳುವ ಗಾಡಿ, 46 ಜನರಿಗೆ ಜೆರಾಕ್ಸ್ ಯಂತ್ರ, 55 ಜನರಿಗೆ ಹೊಲಿಗೆ ಯಂತ್ರಗಳನ್ನು ನೀಡಲಾಗಿದ್ದು, ಇವರೆಲ್ಲರೂ ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಪರೀಕ್ಷೆ ನಡೆಸಿ, ಫೋಟೋ ತೆಗೆದುಕೊಳ್ಳಬೇಕು ಎಂದರು.

ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ನಜ್ಮಾ ಮಾತನಾಡಿ, ಜಿಲ್ಲೆಯಲ್ಲಿ 700:1 ಅನುಪಾತದಲ್ಲಿ ಒಟ್ಟು 943 ಪೌರಕಾರ್ಮಿಕರ ಹುದ್ದೆ ಮಂಜೂರಾಗಿದ್ದು, ಅದರಲ್ಲಿ 395 ಖಾಯಂ ಪೌರಕಾರ್ಮಿಕರು, 325 ನೇರ ಪಾವತಿ ಪೌರ ಕಾರ್ಮಿಕರು ಸೇರಿ ಒಟ್ಟು 720 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ 223 ಹುದ್ದೆಗಳು ಖಾಲಿ ಉಳಿದಿವೆ.



ಹಾಗೂ ವಿಶೇಷ ಮರುಸಮೀಕ್ಷೆಯಲ್ಲಿ ಗುರುತಿಸಿದ 380 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ಗುರುತಿನ ಚೀಟಿ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯ ಉಚ್ಚೆಂಗಪ್ಪ, ಫಲಾನುಭವಿಗಳಿಗೆ ದೊರಕಬೇಕಾದ ಸವಲತ್ತುಗಳು ಸಿಗುತ್ತಿಲ್ಲ. ಸಾಲ ಸೌಲಭ್ಯಕ್ಕಾಗಿ ಸಲ್ಲಿಸಿದ ಅರ್ಜಿಗಳಿಗೆ ಬ್ಯಾಂಕ್‌ಗಳಲ್ಲಿ ಲೋನ್ ನೀಡುತ್ತಿಲ್ಲ. ಇನ್ನೂ ಸಾಕಷ್ಟು ಜನರು ವಸತಿ ಸೌಲಭ್ಯವಿಲ್ಲದೇ ಹೆಣಗಾಡುತ್ತಿದ್ದಾರೆ. ಗುರುತಿನ ಚೀಟಿ ಸಮರ್ಪಕವಾಗಿ ವಿತರಣೆಯಾಗಿಲ್ಲ ಹಾಗೂ ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದ ಸಮೀಕ್ಷೆಯಾಗಿಲ್ಲ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮಾತನಾಡಿ, ಕೋವಿಡ್ ಮುಗಿದ ಬಳಿಕ ಸಮೀಕ್ಷೆ ನಡೆಸಲಾಗುವುದು ಹಾಗೂ ಯಾವ ಬ್ಯಾಂಕ್‌ಗಳಲ್ಲಿ ಲೋನ್ ನೀಡಲು ತಕರಾರು ಮಾಡುತ್ತಾರೆ ಎಂಬುದರ ಕುರಿತು ಪಟ್ಟಿ ಕೊಡಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ಗುರುತಿನ ಚೀಟಿ ನೀಡಿ. ಇದರಿಂದ ಅವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ತಲುಪಿಸಲು ಅನುಕೂಲವಾಗುತ್ತದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಒ ವಿಜಯ ಮಹಾಂತೇಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಕೌಸರ್ ರೇಷ್ಮಾ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಎಚ್ಚರಿಕೆ ಗಂಟೆ ತಂತ್ರಜ್ಞಾನ ಅಳವಡಿಕೆ

(3ನೇ ಪುಟದಿಂದ) ಇಂತಹ ಪ್ರತಿ ಕೇಂದ್ರ ಸ್ಥಾಪಿಸಲು 12 ಕೋಟಿ ರೂ.ಗಳ ಅಗತ್ಯವಿದ್ದು, ಇದರ ಪೂರ್ಣ ಹಣವನ್ನು ಕೇಂದ್ರ ಸರ್ಕಾರ ಭರಿಸಲಿದೆ ಎಂದರು.

ರಾಜ್ಯದ 61 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಎಂದು ಘೋಷಣೆ ಮಾಡಲಾಗಿದೆ. ಈ ಮೊದಲು 39 ತಾಲ್ಲೂಕುಗಳನ್ನು ಇದರ ವ್ಯಾಪ್ತಿಗೆ ಸೇರಿಸಿದ್ದು, ಇದೀಗ ಹೆಚ್ಚುವರಿಯಾಗಿ ಮತ್ತೆ 22 ತಾಲ್ಲೂಕುಗಳನ್ನು ಪ್ರವಾಹ ಪೀಡಿತವೆಂದು ಘೋಷಣೆಗೆ ಸೇರಿಸಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

**ಮಾನ್ಯ ಕಿರಿಯ ವಿಭಾಗದ ಸಿವಿಲ್ ನ್ಯಾಯಾಲಯದಲ್ಲಿ ದಾವಣಗೆರೆ**
**ಅಮಲ್ಜಾರಿ ಸಂಖ್ಯೆ : 146 : 2019**
ಡಿಕ್ರಿದಾರರು : **ಶ್ರೀಮತಿ ಎಸ್.ಪಿ.ರಾಜಮ್ಮ ಮತ್ತು ಇತರರು.** - ವಿರುದ್ಧ -
ಜಡ್ಜ್‌ಮೆಂಟ್ ಡೆಟಾರ್ : **ರವೀಂದ್ರ ಸಿಂಗ್ ಬಿನ್ ಗಂಗಾಸಿಂಗ್,**
ವಯಸ್ಸು 43 ವರ್ಷ, ಜ್ಯೂಯಲರಿ ಅಂಗಡಿ, ಮನೆ ನಂ : 980,
ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು.

**ಆದೇಶ 5 ನಿಯಮ 20 ಸಿಪಿಸಿ ಪ್ರಕಾರ ತಿಳುವಳಿಕೆ**

ಈ ಮೇಲ್ಕಂಡ ಕೇಸನ್ನು ಡಿಕ್ರಿದಾರರು, ಜಡ್ಜ್‌ಮೆಂಟ್ ಡೆಟಾರ್ ರವರ ವಿರುದ್ಧ ಷೆಡ್ಯೂಲ್ ಸ್ವತ್ತನ್ನು ಖುಲ್ಲಾವಡಿಸುವಂತೆ ಓ.ಎಸ್ ನಂ : 357:2016 ರಲ್ಲಿ ಡಿಕ್ರಿ ಪಡೆದು ಈ ಅಮಲ್ಜಾರಿ ಕೇಸನ್ನು ಸ್ವತ್ತಿನ ಸ್ವಾಧೀನ ಪಡಿಸಿಕೊಳ್ಳಲು ಹಾಕಿರುತ್ತಾರೆ. ಈ ಕೇಸಿನ ನೋಟೀಸು ಜಡ್ಜ್‌ಮೆಂಟ್ ಡೆಟಾರ್ ರವರಿಗೆ ಜಾರಿಯಾಗದೆ ವಾಪಾಸ್ಸಾಗಿರುತ್ತದೆ.

ಆದ್ದರಿಂದ ಘನ ನ್ಯಾಯಾಲಯದವರು ಈ ಕೇಸಿನ ವಿಷಯವನ್ನು ಈ ಪತ್ರಿಕಾ ಪ್ರಕಟಣೆ ಮೂಲಕ ಪ್ರಚುರ ಪಡಿಸುವಂತೆ ದಿನಾಂಕ : 04.08.2021ರಂದು ಆದೇಶ ಮಾಡಿ, ಈ ಬಾಬ್ತು ಜಡ್ಜ್‌ಮೆಂಟ್ ಡೆಟಾರ್‌ರವರು ಅವರ ಆಕ್ಷೇಪಣೆ ಇದ್ದಲ್ಲಿ ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ದಿನಾಂಕ 01.10.2021ರಂದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸಬಹುದಾಗಿರುತ್ತದೆ. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಈ ತಿಳುವಳಿಕೆಯನ್ನು ಇದೇ 2021ನೇ ಇಸ್ವಿ ಆಗಸ್ಟ್ ಮಾಹೆ, 7 ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

**ದಿನಾಂಕ 07.08.2021**
**ದಾವಣಗೆರೆ.**
**ಶ್ರೀ ಏಕನಾಥ.ಡಿ.ರಾಯ್ಕರ್,ವ ಕೀಲರು,**
**ದಾವಣಗೆರೆ. ಮೊಬೈಲ್ ನಂ: 9844020566,**
**ಮನೆ ನಂ: 326, 2ನೇ ಮೇನ್**
**ಪಿ.ಜೆ. ಬಡಾವಣೆ, ದಾವಣಗೆರೆ.**

**ನ್ಯಾಯಾಲಯದ ಆದೇಶದ ಮೇರೆಗೆ.**
**ಶಿರಸ್ತೇದಾರರು,**
**ಕಿರಿಯ ವಿಭಾಗದ ಸಿವಿಲ್ ಜಡ್ಜ್‌ರವರ**
**ನ್ಯಾಯಾಲಯ, ದಾವಣಗೆರೆ.**

# ಪಂಚಾಯ್ತಿ ಚುನಾವಣೆಗಳಲ್ಲಿ ಬಿಎಸ್ಪಿ ಸ್ಪರ್ಧೆ

ದಾವಣಗೆರೆ, ಆ.17- ಮುಂಬರುವ ಜಿ.ಪಂ., ತಾ.ಪಂ. ಚುನಾವಣೆಯಲ್ಲಿ ಬಹುಜನ ಸಮಾಜ ಪಾರ್ಟಿಯ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್. ಮುನಿಯಪ್ಪ ತಮ್ಮ ಇಂಗಿತ ವ್ಯಕ್ತಪಡಿಸಿದರು.

ನಗರದ ಹದಡಿ ರಸ್ತೆಯ ಹಳೇ ಜಿಲ್ಲಾ ಖಜಾನೆ ಕಚೇರಿ ಎದುರಿಗಿನ ಕಟ್ಟಡದಲ್ಲಿ ಬಹುಜನ ಸಮಾಜ ಪಕ್ಷದ ಜಿಲ್ಲಾ ಕಾರ್ಯಾಲಯ ಉದ್ಘಾಟಿಸಿ, ನಂತರ ರೋಟರಿ ಬಾಲಭವನದಲ್ಲಿ ನಡೆದ ಪಕ್ಷದ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದರು.

ಸ್ಥಳೀಯ ಸಂಸ್ಥೆಗಳಿಂದ ಹಿಡಿದು ಜಿ.ಪಂ., ತಾ.ಪಂ., ವಿಧಾನ ಸಭೆ ಚುನಾವಣೆಗಳಲ್ಲಿ ಕೂಡ ಬಹುಜನ ಸಮಾಜ ಪಾರ್ಟಿ ವತಿಯಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ಸಿದ್ಧತೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದರು.



ನಗರದ ಹದಡಿ ರಸ್ತೆಯಲ್ಲಿರುವ ಹಳೇ ಜಿಲ್ಲಾ ಖಜಾನೆ ಎದುರಿಗಿನ ಕಟ್ಟಡದಲ್ಲಿ ಬಹುಜನ ಸಮಾಜ ಪಾರ್ಟಿಯ ಜಿಲ್ಲಾ ಕಾರ್ಯಾಲಯವನ್ನು ಆರ್. ಮುನಿಯಪ್ಪ ಉದ್ಘಾಟಿಸಿದರು.

ದೇಶದ ಶೇ.85 ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗದವರಿದ್ದಾರೆ. ಇವರು ಮನಸ್ಸು ಮಾಡಿದರೆ ಹಳ್ಳಿಯಿಂದ ದಿಲ್ಲಿಯವರೆಗೆ ಅಧಿಕಾರ ನಡೆಸುವ ಸಾಮರ್ಥ್ಯವಿದೆ. ಆದರೆ ಇವರು ಅಧಿಕಾರಕ್ಕೆ ಬರಬಾರದೆಂದು ವ್ಯವಸ್ಥಿತವಾಗಿ ಹತ್ತಿಕ್ಕುವ ಹುನ್ನಾರಗಳು ನಡೆಯುತ್ತಿವೆ ಎಂದು ದೂರಿದರು.

ಶೇ.15 ರಷ್ಟಿರುವ ಜನರು ಬಹುಸಂಖ್ಯಾತರಾಗಿರುವ ಎಸ್ಸಿ, ಎಸ್ಟಿ, ಅಲ್ಪಸಂಖ್ಯಾತರು, ಹಿಂದುಳಿದವರನ್ನು ಒಂದಾಗಲು ಬಿಡುತ್ತಿಲ್ಲ. ಅಧಿಕಾರವನ್ನು ತಾವೇ ಅನುಭವಿಸಬೇಕೆಂಬ ದುರಾಸೆ ಅವರದ್ದಾಗಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಪ.ಜಾತಿ, ಪ.ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದವರನ್ನು ಕೇವಲ ಓಟ್ ಬ್ಯಾಂಕ್ ಆಗಿ ಮಾಡಿಕೊಂಡಿವೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಹುಜನ ಸಮಾಜ ಪಾರ್ಟಿಯ ಜಿಲ್ಲಾಧ್ಯಕ್ಷ ಡಿ. ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಡಾ. ಗಿರೀಶ್, ಹೆಚ್. ಮಲ್ಲೇಶ್ ಸೇರಿದಂತೆ ಮುಖಂಡರುಗಳಾದ ವೆಂಕಟೇಶ್ ಐಹೊಳೆ, ಪರಶುರಾಂ, ಶ್ರೀಮತಿ ಯಶೋಧಮ್ಮ, ನಂದೀಶ್, ಎ.ಪಿ. ನದಾಫ್, ರಂಗನಾಥ, ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ನಗರಕ್ಕೆ ಇಂದು ಬಿಜೆಪಿಯ ಜನಾಶೀರ್ವಾದ ಯಾತ್ರೆ

ದಾವಣಗೆರೆ, ಆ. 17- ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಜನಾಶೀರ್ವಾದ ಯಾತ್ರೆಯು ನಾಳೆ ದಿನಾಂಕ 18ರ ಬುಧವಾರ ಸಂಜೆ 4 ಗಂಟೆಗೆ ನಗರಕ್ಕಾಗಮಿಸಲಿರುವುದಾಗಿ ಪಕ್ಷದ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಪ್ರಧಾನಿ ಮೋದಿ ಅವರ ಸಂಪುಟದಲ್ಲಿ ಹೊಸದಾಗಿ ಸೇರ್ಪಡೆಗೊಂಡ 47 ಸಚಿವರ ಪೈಕಿ ರಾಜ್ಯದ 4 ಸಚಿವರಿದ್ದಾರೆ. ಸಂಸತ್‌ನಲ್ಲಿ ಅವರನ್ನು ಪರಿಚಯಿಸಲು ಹಾಗೂ ದೇಶದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವಕಾಶ ಕೊಡದೆ ಕಾಂಗ್ರೆಸ್ ಪಕ್ಷವು ಅಭಿವೃದ್ಧಿ ವಿರುದ್ಧ ಧೋರಣೆ ತಾಳುತ್ತಾ ಸದನದ ಸಮಯ ಹಾಳು ಮಾಡಿದೆ

ಈ ಹಿನ್ನೆಲೆಯಲ್ಲಿ ನೂತನ ಸಚಿವರು ನೇರವಾಗಿ ಜನರ ಬಳಿಯೇ ಆಶೀರ್ವಾದ ಪಡೆದು ಒಳ್ಳೆಯ ಕೆಲಸಕ್ಕೆ ಪ್ರೇರಣೆ ದೊರೆಯಲಿ ಎಂಬ ಉದ್ದೇಶದಿಂದ ಸಚಿವರು ದೇಶಾದ್ಯಂತ ಜನಾಶೀರ್ವಾದ ಯಾತ್ರೆ ಮಾಡುತ್ತಿದ್ದಾರೆಂದು ಹೇಳಿದರು.

ಜನಯಾತ್ರೆ ವೇಳೆ ಕೇಂದ್ರ ಸಚಿವರೊಂದಿಗೆ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಜಿಲ್ಲೆಯ ಎಲ್ಲಾ ಶಾಸಕರು, ಮಾಜಿ ಶಾಸಕರುಗಳು ಆಗಮಿಸಲಿದ್ದಾರೆ ಎಂದು ಹೇಳಿದರು.

ಮುಖಂಡ ಬಿ.ಎಸ್. ಜಗದೀಶ್ ಮಾತನಾಡಿ, ಸಂಜೆ 4ರ ವೇಳೆಗೆ ಹೆಬ್ಬಾಳು ಟೋಲ್ ಬಳಿ ಜನಾಶೀರ್ವಾದ ಯಾತ್ರೆಯನ್ನು ಸ್ವಾಗತಿಸಲಾಗುವುದು. 4.20ಕ್ಕೆ ಜಿಲ್ಲಾ ಪಂಚಾಯ್ತಿ ಆವರಣದಿಂದ ಬೈಕ್ ರ್‍ಯಾಲಿ ನಡೆಯಲಿದೆ. ರ್‍ಯಾಲಿ ಮೂಲಕ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಲಾಗುವುದು. ಪ್ರಮುಖ ವೃತ್ತಗಳಲ್ಲಿನ ದಾರ್ಶನಿಕರ ಮೂರ್ತಿಗೆ ಪುಷ್ಪಾರ್ಚನೆ ಮಾಡಲಾಗುವುದು ಎಂದರು.

ಸಂಜೆ 5 ಗಂಟೆಗೆ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕೇಂದ್ರ ಸಚಿವರು 6.30ಕ್ಕೆ ಆರೆಸ್ಸೆಸ್ ಕಾರ್ಯಾಲಯಕ್ಕೆ ಭೇಟಿ ನೀಡಿ, ನಂತರ 7.30ಕ್ಕೆ ವೈದ್ಯಕೀಯ ಪ್ರಕೋಷ್ಠದ ಭೇಟಿ ಮಾಡಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಂಜಾನಾಯ್ಕ, ಡಿ.ಎಸ್. ಶಿವಶಂಕರ್, ಹೆಚ್.ಬಿ. ವಿಶ್ವಾಸ್ ಉಪಸ್ಥಿತರಿದ್ದರು.

## ಭಾರತಕ್ಕೆ ಬರಲು ಆಫ್ಘನ್ನರಿಗೆ ಇ-ವೀಸಾ

ನವದೆಹಲಿ, ಆ. 17 – ಆಫ್ಘಾನಿಸ್ತಾನದಲ್ಲಿರುವ ತನ್ನ ರಾಯಭಾರಿ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಂಡಿರುವ ಭಾರತ, ಈಗ ದೇಶಕ್ಕೆ ಬರಲು ಬಯಸುವ ಆಫ್ಘನ್ನರಿಗೆ ಇ-ವೀಸಾ ಸೌಲಭ್ಯ ಪ್ರಕಟಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಭೆಯಲ್ಲಿ ಹಿರಿಯ ಸಚಿವರಾದ ಅಮಿತ್ ಷಾ, ರಾಜನಾಥ್ ಸಿಂಗ್ ಹಾಗೂ ನಿರ್ಮಲಾ ಸೀತಾರಾಮನ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ವಿದೇಶಾಂಗ ಕಾರ್ಯದರ್ಶಿ ಹರ್ಷ ಶ್ರೀಂಗ್ಲ ಹಾಗೂ ಆಫ್ಘಾನಿಸ್ತಾನದಲ್ಲಿ ಭಾರತದ ರಾಯಭಾರಿಯಾಗಿರುವ ರುದ್ರೇಂದ್ರ ಟಂಡನ್ ಉಪಸ್ಥಿತರಿದ್ದರು.

ಆಫ್ಘಾನಿಸ್ತಾನದಲ್ಲಿರುವ ಭಾರತದ ಎಲ್ಲಾ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ ಕರೆ ತರಬೇಕು. ಸಿಖ್ ಹಾಗೂ ಹಿಂದೂ ಅಲ್ಪಸಂಖ್ಯಾತರು ಭಾರತೀಯರ ಜೊತೆ ಬರಲು ಬಯಸಿದರೆ ಆಶ್ರಯ ನೀಡಬೇಕು. ನೆರವು ಬಯಸುವ ಆಫ್ಘನ್ ನಾಗರಿಕರಿಗೆ ಎಲ್ಲ ಸಹಾಯ ನೀಡಬೇಕು ಎಂದು ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ. 1996ರ ನಂತರ ಎರಡನೇ ಬಾರಿ ಭಾರತೀಯ ರಾಯಭಾರಿ ಕಚೇರಿಯನ್ನು ಮುಚ್ಚಲಾಗುತ್ತಿದೆ. ಎಲ್ಲಾ ಆಫ್ಘಾನಿಸ್ತಾನೀ ಯರು ಇ-ತುರ್ತು ವೀಸಾಗೆ ಅರ್ಜಿ ಸಲ್ಲಿಸ ಬಹುದಾಗಿದೆ. ಆನ್‌ಲೈನ್ ಮೂ ಲಕ ಸಲ್ಲಿಸುವ ಮನವಿಗಳನ್ನು ದೆಹಲಿಯಲ್ಲಿ ಪರಿಶೀಲಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

## 8,555 ಉತ್ಪನ್ನಗಳ ರಫ್ತಿಗೆ ಉತ್ತೇಜನ

ನವದೆಹಲಿ, ಆ. 17 – ಕೇಂದ್ರ ಸರ್ಕಾರ 8,555 ಉತ್ಪನ್ನಗಳಿಗೆ ರಫ್ತು ಉತ್ತೇಜನ ನೀಡುವ ಆರ್.ಒ.ಡಿ.ಟಿ.ಇ.ಪಿ. ಯೋಜನೆಯನ್ನು ಪ್ರಕಟಿಸಿದೆ. ಇದು ಸಮುದ್ರ ಉತ್ಪನ್ನ, ದಾರ, ಡೈರಿ ಉತ್ಪನ್ನ ಮತ್ತಿತರೆ ವಸ್ತುಗಳ ರಫ್ತಿಗೆ ನೆರವಾಗಲಿದೆ. ಈ ಯೋಜನೆಗಾಗಿ 12,454 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಈ ಯೋಜನೆಯ ಅನ್ವಯ ರಫ್ತು ಸರಕುಗಳಿಗೆ ಕೇಂದ್ರ ಹಾಗೂ ರಾಜ್ಯಗಳ ತೆರಿಗೆ ಹಾಗೂ ಲೆವಿಗಳನ್ನು ವಾಪಸ್ ನೀಡಲಾಗುವುದು.

## ನಗರಕ್ಕೆ ಇಂದು ಕೇಂದ್ರ ಸಚಿವ ನಾರಾಯಣ ಸ್ವಾಮಿ



ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಸಂಜೆ 4 ಗಂಟೆಗೆ ಆನಗೋಡಿಗೆ ಆಗಮಿಸುವ ಸಚಿವರು, ಸಂಜೆ 4.15ಕ್ಕೆ ನಗರಕ್ಕೆ ಆಗಮಿಸಿ, ನಗರ ದೇವತೆ ಶ್ರೀ ದುರ್ಗಾಂಬಿಕ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆಯುವರು. ಸಂಜೆ 4.30ಕ್ಕೆ ಬಸವೇಶ್ವರ ವೃತ್ತದ ಬಳಿಯ ಶ್ರೀ ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ನೆರವೇರಿಸುವರು. ಸಂಜೆ 5.30 ಕ್ಕೆ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿರುವ ಜನಾಶೀರ್ವಾದ ಸಮಾವೇಶದಲ್ಲಿ ಭಾಗವಹಿಸುವರು. ಸಂಜೆ 6.30ಕ್ಕೆ ಪಕ್ಷದ ಕಾರ್ಯಾಲಯಕ್ಕೆ ತೆರಳುವರು. ರಾತ್ರಿ 7.30ಕ್ಕೆ ಜಿಎಂಐಟಿ ಅತಿಥಿ ಗೃಹಕ್ಕೆ ತೆರಳಿ ವಾಸ್ತವ್ಯ ಮಾಡುವರು.

ನಾಳೆ ದಿನಾಂಕ 19ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಬೆಳ್ಳೂಡಿಯ ಕಾಗಿನೆಲೆ ಮಠಕ್ಕೆ ತೆರಳುವರು. ನಂತರ ಬೆಳಿಗ್ಗೆ 8.30 ಗಂಟೆಗೆ ಹರಿಹರದ ಪಂಚಮಸಾಲಿ ಮಠಕ್ಕೆ ಭೇಟಿ ನೀಡುವರು. ಬೆಳಿಗ್ಗೆ 9 ಗಂಟೆಗೆ ರಾಜನಹಳ್ಳಿಗೆ ತೆರಳುವರು. ಬಳಿಕ ಕುಮಾರಪಟ್ಟಣ ಮೂಲಕ ರಾಣೆಬೆನ್ನೂರಿಗೆ ತೆರಳುವರು.

## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಬಾಕಿ ಅನುದಾನ ಬಿಡುಗಡೆಗೆ ಮನವಿ



ದಾವಣಗೆರೆ, ಆ.17- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಪ್ರಸ್ತುತ ಚಾಲ್ತಿಯಲ್ಲಿರುವ ಸ್ಕೀಂಗಳ ಅನುದಾನ ಬಿಡುಗಡೆಯಾಗದೆ ಬಾಕಿ ಉಳಿದಿದ್ದು, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಸಿಂಡಿಕೇಟ್ ಬ್ಯಾಂಕ್ ಮಾಜಿ ನಿರ್ದೇಶಕ ಸಿ.ಆರ್.ನಸೀರ್ ಅಹ್ಮದ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬೆಂಗಳೂರಿನಲ್ಲಿ ಇಂದು ಭೇಟಿ ಮಾಡಿ, ಕೂಡಲೇ ಅನುದಾನ ಮಂಜೂರು ಮಾಡಲು ಮನವಿ ಸಲ್ಲಿಸಿದರು.

## ಜಿಲ್ಲಾ ಆರ್ಯ ಈಡಿಗರ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಆ.17- ಜಿಲ್ಲಾ ಆರ್ಯ ಈಡಿಗರ ಸಂಘದ ವತಿಯಿಂದ ಜಿಲ್ಲಾ ಆರ್ಯ ಈಡಿಗ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ, ಪದವಿ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಇದೇ ದಿನಾಂಕ 31 ರ ಒಳಗಾಗಿ ಆರ್ಯ ಈಡಿಗರ ವಿದ್ಯಾರ್ಥಿ ನಿಲಯದಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸಲು ಕಾರ್ಯದರ್ಶಿ ಎ. ನಾಗರಾಜ್ ತಿಳಿಸಿದ್ದಾರೆ. ವಿವರಗಳಿಗೆ ದೂರವಾಣಿ 08192-254261, 9845355008 ಗೆ ಸಂಪರ್ಕಿಸಬಹುದು.

## ನಗರಕ್ಕೆ ಇಂದು ಜಿಲ್ಲಾ ಸಚಿವ ಭೈರತಿ ಬಸವರಾಜ

ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು ಸಂಜೆ 4 ಕ್ಕೆ ನಗರಕ್ಕೆ ಆಗಮಿಸಿ, ಜನಾಶೀರ್ವಾದ ಯಾತ್ರೆ ಸಮಾವೇಶದಲ್ಲಿ ಪಾಲ್ಗೊಳ್ಳುವರು.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte